ಸಂಪುಟ 01 | ಸಂಚಿಕೆ 05 | ಗುರುವಾರ 20 ನವೆಂಬನ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ವಿಶ್ವ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ದಿನ**

ಈ ಸವಾಲಿನ ಮತ್ತು ಹೆಚ್ಚಾಗಿ ಮಾರಕ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು, ಆರಂಭಿಕ ಪತ್ತೆ, ಸುಧಾರಿತ ಚಿಕಿತ್ಸೆ ಮತ್ತು ಸಂಶೋಧನಾ ನಿಧಿಯ ಹೆಚ್ಚಳದ ನಿರ್ಣಾಯಕ ಅಗತ್ಯವನ್ನು ಒತ್ತಿಹೇಳಲು ವಿಶ್ವ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ಜಾಗೃತಿ ಮೂಡಿಸುವ ಮೂಲಕ, ಜನರಿಗೆ ಮುಂಚಿನ ಎಚ್ಚರಿಕೆ ಚಿಹ್ನೆಗಳು ಮತ್ತು ಅಪಾಯಕಾರಿ ಅಂಶಗಳ ಬಗ್ಗೆ ಶಿಕ್ಷಣ ನೀಡುವ ಮೂಲಕ ಬದುಕುಳಿಯುವಿಕೆಯ ಪ್ರಮಾಣ ಮತ್ತು ಬಾಧಿತರ ಜೀವನದ ಗುಣಮಟ್ಟವನ್ನು ಸುಧಾ-ರಿಸುವ ಗುರಿಯನ್ನು ಈ ದಿನ ಹೊಂದಿದೆ.

**2) ಸಾರ್ವತ್ರಿಕ ಮಕ್ಕಳ ದಿನ (Universal Children's Day)** ವಿಶೇಷತೆ: ವಿಶ್ವಸಂಸ್ಥೆಯು ಜಾಗತಿಕ ಸಹಕಾರವನ್ನು ಉತ್ತೇಜಿಸಲು, ಮಕ್ಕಳ ಕಲ್ಯಾಣದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಮಕ್ಕಳ ಹಕ್ಕುಗಳ ಸಂರಕ್ಷಣೆಯ ಮಹತ್ವವನ್ನು ಒತ್ತಿಹೇಳಲು ಈ ದಿನವನ್ನು ಆಚರಿಸುತ್ತದೆ. ಈ ದಿನದಂದು (1989 ರಲ್ಲಿ) 'ಮಕ್ಕಳ ಹಕ್ಕುಗಳ ಒಡಂಬಡಿಕೆ'ಯನ್ನು ಅಂಗೀಕರಿಸಲಾಯಿತು

**3)ವಿಶ್ವ ಸಿಓಪಿಡಿ ದಿನ (World COPD Day)** ವಿಶೇಷತೆ: ಪ್ರತಿ ವರ್ಷ ನವೆಂಬರ್‌ನಲ್ಲಿ ಮೂರನೇ ಗುರುವಾರದಂದು ವಿಶ್ವ ದೀರ್ಘಕಾಲದ ಪ್ರತಿರೋಧಕ ಶ್ವಾಸಕೋಶದ ಕಾಯಿಲೆ ದಿನÀ (World Chronic Obstructive Pulmonary Disease Day) ವನ್ನು ಆಚರಿಸಲಾಗುತ್ತದೆ. ಶ್ವಾಸಕೋಶದ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶ. ನವೆಂಬರ್ 20, 2025 ಮೂರನೇ ಗುರುವಾರವಾಗಿರುವುದರಿಂದ ಇದನ್ನು ಆಚರಿಸಲಾಗುತ್ತದೆ.

## ಸುಭಾಷಿತ

'ಯಶಸ್ಸು ಸಿಕ್ಕಾಗ ಅದನ್ನು
ಸಂಭ್ರಮಿಸುವುದರಲ್ಲಿ ತಪ್ಪೇನೂ ಇಲ್ಲ
ಎನ್ನುವುದು ನಿಜ.
ಆದರೆ, ಸೋಲು ಕಲಿಸುವಪಾಠಗಳಿಗೆ
ನಾವು ಹೆಚ್ಚು ಗಮನ ಕೊಡಬೇಕು.
ಇದೇ ಅತ್ಯಂತ ಮುಖ್ಯ.'

–ಬಿಲ್ ಗೇಟ್ಸ್

**ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

## ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ ಮೀಸಲಾತಿ

# ಪ್ರಮಾಣ ಕುರಿತ ಸುಪ್ರೀಂ ತೀರ್ಪು

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇತರೆ ಹಿಂದುಳಿದ ವರ್ಗ(ಒಬಿಸಿ)ಗಳಿಗೆ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕಿಂತ ಹೆಚ್ಚಿಸಬಾರದೆಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಏಕೆಂದರೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಜಯಪ್ರಕಾಶ್ ಹೆಗಡೆ, ಜಯಪ್ರಕಾಶ್ ಹೆಗಡೆ ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಬಿಸಿಗಳಿಗೆ ನೀಡಲಾಗುತ್ತಿರುವ ಹೆಚ್ಚಳ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದರು.

ಇದರ ಪ್ರಕಾರ ಜನವರಿ ಇಲ್ಲವೇ ಫೆಬ್ರವರಿ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಿದ್ದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಉಳಿದ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಒಬಿಸಿ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲು ತೀರ್ಮಾನಿಸಲಾಗಿತ್ತು. ಇದಕ್ಕಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಭಕ್ತವತ್ಸಲ ಅವರ ನೇತೃತ್ವದಲ್ಲಿ ಸಮಿತಿ ರಚಿಸಿ, ವರದಿ ನೀಡುವಂತೆ ಸರ್ಕಾರ ಸೂಚನೆ ಕೊಟ್ಟಿತ್ತು. ಆದರೆ ಸುಪ್ರೀಂಕೋರ್ಟ್ ಮಹಾರಾಷ್ಟ್ರ ಸ್ಥಳೀಯ ಸಂಸ್ಥೆಗಳ ಚುನಾವಣೆ, ಮೀಸಲಾತಿಗೆ ಸಂಬಂಧಿಸಿದಂತೆ



ನೀಡಿರುವ ತೀರ್ಪು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ.

ನೀವು ಶೇ.50ಕ್ಕಿಂತ ಹೆಚ್ಚು ಮೀಸಲಾತಿಯನ್ನು ಹೆಚ್ಚಳ ಮಾಡಿದರೆ ಯಾವುದೇ ಕಾರಣಕ್ಕೂ ನಾವು ಒಪ್ಪುವುದಿಲ್ಲ. ಅಲ್ಲದೆ ಚುನಾವಣೆಯನ್ನೇ ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಮಹಾರಾಷ್ಟ್ರಕ್ಕೆ ನೀಡಿರುವ ತೀರ್ಪು ದೇಶದ ಎಲ್ಲಾ ರಾಜ್ಯಗಳಿಗೂ ಎಚ್ಚರಿಕೆ ಗಂಟೆ ಎಂದು ಹೇಳಲಾಗುತ್ತಿದೆ. ನಾವು ನೀಡಿರುವ ತೀರ್ಪಿನ ಪ್ರಕಾರ ನೀವು ಮೀಸಲಾತಿಯನ್ನು ಶೇ.50ಕ್ಕೆ ಹೆಚ್ಚಿಸದೆ ಚುನಾವಣೆ ನಡೆಸಲು ನಮ ಅಭ್ಯಂತರವಿಲ್ಲ. ಒಂದು ವೇಳೆ ಹಿಂದೆ ನೀಡಿರುವ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡುತ್ತೇವೆ ಎಂದರೆ ಚುನಾವಣೆ ನಡೆಸಲು ಅವಕಾಶ ಕೊಡುವುದಿಲ್ಲ. ಪುನಃ ನ್ಯಾಯಾಲಯಕ್ಕೆ ಬರಬಾರದು ಎಂದು ಮಹಾರಾಷ್ಟ್ರ ಪರ ವಾದ ಮಂಡಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವ-ರಿಗೆ ಸುಪ್ರೀಂಕೋರ್ಟ್ ಸ್ಪಷ್ಟ ಮಾತುಗಳಲ್ಲಿ ಹೇಳಿವೆ.

ಇದು ಕೇವಲ ಮಹಾರಾಷ್ಟ್ರಕ್ಕೆ ಮಾತ್ರವಲ್ಲದೆ ದೇಶದ ಎಲ್ಲಾ ರಾಜ್ಯಗಳಿಗೂ ಈ ತೀರ್ಪು ಅನ್ವಯವಾಗಲಿದೆ ಎಂದು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜಯಪ್ರಕಾಶ್ ಹೆಗ್ಗಡೆ ನೇತೃತ್ವದ ಸಮಿತಿಯು ಪರಿಶಿಷ್ಟ ಜಾತಿ/ಪಂಗಡಗಳ ಮೀಸಲಾತಿ ಯಥಾಸ್ಥಿತಿ, ಪರಿಶಿಷ್ಟ ಜಾತಿ 17.15%, ಪರಿಶಿಷ್ಟ ಪಂಗಡಕ್ಕೆ 6.95% ಮೀಸಲಾತಿ, ಹಿಂದುಳಿದ ವರ್ಗ 1ಎ ಮೀಸಲಾತಿ 6% ಹೆಚ್ಚಿಸಬೇಕು, ಹಿಂದುಳಿದ ವರ್ಗ 1ಬಿ ಸೃಷ್ಟಿ, 12% ಮೀಸಲಾತಿ ಕೊಡಬೇಕು, ಹಿಂದುಳಿದ ವರ್ಗ 2ಎ 10% ಮೀಸಲಾತಿ ಕೊಡಬೇಕು, ಮುಸ್ಲಿಂ ಮೀಸಲಾತಿಯನ್ನು 4%ನಿಂದ 8%ಕ್ಕೆ ಏರಿಸಬೇಕು, ಲಿಂಗಾಯತ, ಉಪಜಾತಿಗಳ 3ಬಿ ಮೀಸಲಾತಿ 5%ನಿಂದ 8%ಕ್ಕೆ ಏರಿಸಬೇಕು, ಒಕ್ಕಲಿಗ, ಉಪಜಾತಿಗಳ 3ಎ ಮೀಸಲಾತಿ 3ನೇ ಪುಟಕ್ಕೆ

## ಮೊಬೈಲ್' ಬಿಡಿ, ಪುಸ್ತಕ ಹಿಡಿ :ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು



**❑ ನೈಜ್ಯ ದೆಸೆ ನ್ಯೂಸ್**

ದೇವದುರ್ಗ: ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಇಂದಿನ ಮಕ್ಕಳ ಪಾತ್ರವು ಬಹಳ ಮಹತ್ತರವಾದದ್ದು, ಆದ್ದರಿಂದ ಮಕ್ಕಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣದ ಮಹತ್ವವನ್ನು ಸಾರುವ ಸಲುವಾಗಿ ನವೆಂಬರ್ 14 ರಂದು ದೇಶಾದ್ಯಂತ ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ಇನ್ನೂ ಮಕ್ಕಳು ಮೋಬೈಲ್ ಹಿರಿಯುವುದನ್ನು ಬಿಟ್ಟು ಓದುವ ಕಡೆ ಹವ್ಯಾಸ ಬೆಳಸಿಕೊಳ್ಳಿ ಎಂದು ಶಾರದಾ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯ ರು ಹಾಗೂ ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ಹೇಳಿದರು ಅವರು ಸೋಮವಾರ ದಂದು ಬಸವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ದೇವದುರ್ಗದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಆದ-ುನಿಕ ಯುಗದಲ್ಲಿ ಮೊಬೈಲ್ ಗಿಳು ಬಹಳ ಆಗಿದೆ, ಪುಸ್ತಕ ಅಭ್ಯಾಸ ಕಡಿಮೆ ಆಗುತ್ತಿದೆ ಎಂದು ಮಾರ್ಮಿಕವಾಗಿ ನುಡಿದರು, ಶಾಲೆಯಲ್ಲಿ ಆಂಗ್ಲ ಭಾಷೆ ಕಲಿಯಿರಿ ಮನೆ ಮತ್ತು ಸಮಾಜದಲ್ಲಿ ಮಾತೃ ಭಾಷೆ ಕನ್ನಡವನ್ನು ಮಾತನಾಡಿ ಎಂದು ಹೇಳಿದರು.

ನಂತರ ಯುವ ಕವಿ, ಲೇಖಕ ಮಲ್ಲಿಕಾರ್ಜುನ ನಾಯಕ ಕಾರ್ಯಕ್ರಮ ಕು-ರಿತು ಮಾತನಾಡಿ ಬಸವ ಶಿಕ್ಷಣ ಸಂಸ್ಥೆ ವಿದ್ಯಾಕಾಶಿ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲಾ, ಸಮಾಜಕ್ಕೆ ವಿದ್ಯಾವಂತ ಪ್ರಜೆಗಳನ್ನ ನೀಡುತ್ತಿರುವುದು ಶ್ಲಾಘನಿಯ, ಸಾಲುಮರದ ತಿಮ್ಮಕ್ಕರನ್ನ ನೆನೆದು ಬಸವ ಶಿಕ್ಷಣ ಸಂಸ್ಥೆಯು ಸಸಿ ನೆಟ್ಟು ಸಂಕೇತಿಕವಾಗಿ ಮೌನಾಚಾರಣೆ ಮಾಡಿ ವೃಕ್ಷಮಾತೇ ನೆನೆಯುತ್ತಿರುವು ಬಹಳ ಅವಿಸ್ಮರಣೀಯ ಎಂದು ಹೇಳಿದರು, ಈ ಸಂದರ್ಭದಲ್ಲಿ ಬಸವ ಶಿಕ್ಷಣ ಸಂಸ್ಥೆಯ ಗೌರವ ಸಲಹೆಗಾರರಾದ ತಿರುಪತಿ ಸೂಗೂರು, ಶ್ಯಾಮ್ ಸುಂದರ್, ಹನುಮಂತ್ರಾಯ, ವೇಣು, ಪ್ರಭುರಾಯ, ಎ.ಎಸ್.ಕೆ.ಸ್ವಾಮಿ, ಗುರುನಾಥ, ನೀರಂಜನ್' ಮಸರಕಲ್, ಮನುನಾಥ, ಅಮೃತ, ಫಯಾಜ್, ಸಂಸ್ಥೆಯ ಶಿಕ್ಷಕ ವೃಂದ, ಉಪನ್ಯಾಸಕರು, ರವಿ ರಾಯಚೂರ್ಕರ್ ಅವರು ವೇದಿಕೆ ನಿರೂಪಣೆ ಮಾಡಿದರು, ಈ ವೇಳೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳು ಮತ್ತು ಪೋಷಕರು ಇದ್ದರು.

## ಬಳಗಾನೂರು ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಭಾಗವಹಿಸಿ ಪ್ರಥಮ ಸ್ಥಾನ

**❑ ನೈಜ್ಯ ದೆಸೆ ನ್ಯೂಸ್**

ಬಳಗಾನೂರು: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯ ವಿದ್ಯಾರ್ಥಿನಿಯರು ಭಾಗವಹಿಸಿ ಪ್ರಥ-ಮ ಸ್ಥಾನ ಪಡೆಯುವುದರ ಮೂಲಕ ಶಾಲೆಯ ಕೀರ್ತಿಯನ್ನು ಬೆಳಗಿಸಿದರು.

ಭರತನಾಟ್ಯ ಸ್ಪರ್ಧೆಯಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಸಹನಾ ವೆಂಕಟೇಶ್ ಅವರು ಪ್ರಥಮ ಸ್ಥಾನ ಗಳಿಸಿದ್ದಾರೆ, 10ನೇ ತರಗತಿಯ ಆರತಿ ಭಾವಗೀತೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ, ರಸಪ್ರಶ್ನೆ ಕಾರ್ಯಕ್ರಮದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಾದ ಐಮದ್ ಹಾಗೂ







ನಾಗರತ್ನ ಅವರು ಪ್ರಥಮ ಸ್ಥಾನ ಗಳಿಸಿದ್ದಾರೆ, ಭಾವಗೀತೆ ಸ್ಪರ್ಧೆಯಲ್ಲಿ 10ನೇ ತರಗತಿ ವಿದ್ಯಾರ್ಥಿನಿ ರಂಜಿತಾ ಪ್ರಥಮ ಸ್ಥಾನ ಗಳಿಸಿರುತ್ತಾರೆ. ಈ ಎಲ್ಲಾ ಸ್ಪರ್ಧಾರ್ಥಿಗಳಿಗೆ ಶಾಲೆಯ ಅಧ್ಯಕ್ಷರು ಕಾರ್ಯದರ್ಶಿಗಳು ಹಾಗೂ ಸರ್ವ ಸಮಿತಿಯ ಸದಸ್ಯರು ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ಅಮರನಾಥ ಹಳ್ಳೂರ್ ಹಾಗೂ ಎಲ್ಲಾ ಶಿಕ್ಷಕ ವರ್ಗದವರು ಅಭಿನಂದನೆ ತಿಳಿಸಿದ್ದಾರೆ.

## RH No 3 ಗ್ರಾಮದ ಐಕಾನ್ ಫ್ಯೂಚರ್ ಸ್ಕೂಲ್ ನಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ

**❑ ನೈಜ್ಯ ದೆಸೆ ನ್ಯೂಸ್**

**ಗ್ರಾಮದ ಐಕಾನ್ ಫ್ಯೂಚರ್ ಸ್ಕೂಲ್ ನಲ್ಲಿ ನಡೆದ ಆರ್.ಎಚ್. ನಂ?1 ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳು ಯಶಸ್ವಿಯಾಗಿ ನೆರವೇರಿವೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆರ್.ಎಚ್. ನಂ 1 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ತೋರಿಸಿ ಪ್ರಥಮ ಸ್ಥಾನಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.**

ವಿದ್ಯಾರ್ಥಿಗಳು ಈ ಕೆಳಕಂಡ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ:

1. ಕಥೆ ಹೇಳುವುದು ಪೂರ್ಣೇಶ್ಮಾ (ಪ್ರಥಮ ಸ್ಥಾನ)
2. ದೇಹಭಾಷೆ ಗೀತೆ ಬಿಂದುಶ್ರೀ (ಪ್ರಥಮ ಸ್ಥಾನ)
3. ಇಂಗ್ಲಿಷ್ ಕರ್ತವ್ಯ ಪಠಣ ಗುರುತರುಣ್ ತೇಜ್ (ಪ್ರಥಮ ಸ್ಥಾನ)







4. ಅಭಿನಯ ಗೀತೆಕುಮಾರಿ ಮಿಲೋನ (ಪ್ರಥಮ ಸ್ಥಾನ)

ಆರ್.ಎಚ್. ನಂ1 ಶಾಲೆಯ ವಿದ್ಯಾರ್ಥಿಗಳ ಈ ಸಾಧನೆ ಶಿಕ್ಷಕರ ಮಾರ್ಗದರ್ಶನ, ಪೋಷಕರ ಬೆಂಬಲ ಮತ್ತು ಮಕ್ಕಳ ಪರಿಶ್ರಮದ ಫಲವಾಗಿದೆ. ಮುಂಬರುವ ತಾಲ್ಲೂಕು ಮಟ್ಟದ ಸ್ಪರ್ಧೆಗಳಲ್ಲಿ ಕೂಡ ಇವರಿಗೆ ಉತ್ತಮ ಯಶಸ್ಸು ಸಿಗಲೆಂದು ಹಾರೈಸಲಾಗಿದೆ.

## ಆರೋಗ್ಯಕ್ಕೆ ಹಾನಿಕಾರಕವಾದ ತಂಬಾಕು ಬಳಕೆಯಿಂದ ದೂರವಿರಿ: ಡಾ.ಗುಂಡಮ್ಮ ಸಲಹೆ

**❑ ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನವೆಂಬರ್ 19 (ಕರ್ನಾಟಕ ವಾರ್ತೆ): 4000 ರಾಸಾಯನಿಕಗಳನ್ನು ಹೊಂದಿರುವ ತಂಬಾಕು ಹಾಗೂ ಅದರ ಉತ್ಪನ್ನಗಳನ್ನು ಬಳಸದೆ ಇರಲು ಎಲ್ಲರೂ ತೀರ್ಮಾನಿಸುವ ಮೂಲಕ ಸದೃಢ ಯುವ ಸಮುದಾಯವನ್ನು ರೂಪಿಸಲು ಮುಂದೆ ಬನ್ನಿ ಎಂದು ಸಿಯಾತಲಾಬ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಗುಂಡಮ್ಮ ಅವರು ಕಾಲೇಜು ವಿದ್ಯಾರ್ಥಿಗಳಿಗೆ ವಿನಂತಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ರವರ ಸಹಯೋಗದಲ್ಲಿ ರಾಯಚೂರು ನಗರದ ಬಾಲಕರ ಸರ್ಕಾರಿ



ಪದವಿಪೂರ್ವ ಕಾಲೇಜಿನಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಅಡಿಯಲ್ಲಿ ನವೆಂಬರ್ 19ರಂದು ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ತಂಬಾಕು ಸೇವೆನೆಯು ಗಂಭೀರವಾದ ಆರೋಗ್ಯ ಸಮಸ್ಯೆಗಳಾದ ಕ್ಯಾನ್ಸರ್, ಹೃದಯ ರೋಗ, ಶ್ವಾಸಕೋಶದ ತೊಂದರೆಗಳು, ಹಲ್ಲಿನ ಸಮಸ್ಯೆಗಳು ಮತ್ತು ಫಲವತ್ತತೆಯ ಸಮಸ್ಯೆಗಳು ಉಂಟಾಗುತ್ತವೆ ಎಂದು ಅವರು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್. ದಾಸಪ್ಪನವರ ಅವರು ಮಾತನಾಡಿ ಬೀಡಿ, ಸಿಗರೇಟ್,ಹುಕ್ಕಾಮುಂತಾದವುಗಳನ್ನು,ಬಳಸುವವರ ಒಡನಾಡಿಗಳಿಗೆ, ಕುಟುಂಬದ ಸದಸ್ಯರಿಗೆ ಹಾಗೂ ಬೀಡಿ ಸಿಗರೇಟ್ ಸೇದುವುದಕ್ಕಾಗಿಯೇ ಕೆಲವು ಅಂಗಡಿಗಳನ್ನು ಗುರ್ತಿಸಿಕೊಳ್ಳುವ ಅಂಗಡಿಗಳ ಮಾಲೀಕರಿಗೂ ಸಹ ಪರೋಕ್ಷ ಧೂಮಪಾನದ ಮೂಲಕ ಹೆಚ್ಚು ಹಾನಿಯುಂಟಾಗುತ್ತದೆ. ಮತ್ತು ಅಕಾಲಿಕ ಸಾವುಗಳಿಗೆ ಕಾರಣವಾಗುತ್ತದೆ. ತಂಬಾಕಿನ ಬಳಕೆಯಿಂದಾಗಿ ಕ್ಯಾನ್ಸರ್ ಸೇ-ರಿದಂತೆ ದೇಹದ ಬಹುತೇಕ ಎಲ್ಲಾ ಅಂಗಾಂಗಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು, ಪುರುಷರಲ್ಲಿ ವಿಕೃತ ವಿರ್ಯಾಣು ಉತ್ಪಾದನೆ, ಮಹಿಳೆಯರಲ್ಲಿ ಬಂಜೆತನಕ್ಕೆ ಕಾರಣವಾಗುವ ಮೂಲಕ ಸಂತಾನಭಿವೃದ್ದಿಗೆ ಮಾರಕವಾಗುತ್ತವೆ.

ಈ ದಿಶೆಯಲ್ಲಿ ಯುವಜನತೆ ಇಂದಿನಿಂದಲೆ ತಂಬಾಕು ಉತ್ಪನ್ನಗಳ ಬಳಕೆಯಿಂದ ದೂರವಾಗಲು ಮನವಿ ಮಾಡಿದರು.

ಪ್ರತಿಜ್ಞೆ: ಉಪನ್ಯಾಸಕರಾದ ಗೋವರ್ಧನ ರೆಡ್ಡಿ ನಶೆ ಮುಕ್ತ ಭಾರತ ಅಡಿಯಲ್ಲಿ ಮಾದಕ, ಪದಾರ್ಥ, ತಂಬಾಕು ಬಳಕೆ ತ್ಯಜಿಸುವ ಕುರಿತು ಪ್ರತಿಜ್ಞೆ ಬೋಧಿಸಿದರು. ಕಾಲೇಜಿನ ಪ್ರಾಂಶುಪಾಲರಾದ ರವೀಂದ್ರ ಎಸ್ ಬಂಡಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ., ಉಪನ್ಯಾಸಕರಾದ ಗೋವರ್ಧನ ರೆಡ್ಡಿ, ಮಲ್ಲಮ್ಮ ಮೇಟಿ, ಮೆಹಬೂಬ್, ವೆಂಕನಗೌಡ, ಪಿಹೆಚ್‌ಸಿಓ ರೇಣುಕಾ, ಆಶಾ ಕಾರ್ಯಕರ್ತೆ ಅರುಣ, ವಿಮಲ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾಹಿತ್ಯ ಸಿಂಚನ

## ಬಾರ್ಡೋಲಿಯ ಸರದಾರ

ಬಾರ್ಡೋಲಿಯ ಸರದಾರ ನಮಗೀಗ ಹರಿಕಾರ
ಸತ್ಯ ಅಹಿಂಸಾ ಕ್ರಾಂತಿಕಾರಕ ವಿಚಾರಗಳ ಜೇಂಕಾರ
ನಮ್ಮಿ ಸರದಾರ ... ನಮ್ಮಿ ಸರದಾರ...

ನಮ್ಮಿ ಸರದಾರ?ಕರಮಸಕದ ಕಲಿ, ಗೋದ್ರಾದ ಹುಲಿ,
ಜೇವೇರಿ ಲಾಡರ ಲಾಡ್ಲಾ..
ನಮ್ಮೀ ಸರದಾರ.. ನಮ್ಮೀ ಸರದಾರ..

ಆಪರೇಷನ್ ಬ್ಲೂ ನ ನೇತಾರ,
ಕಲ್ಯಾಣ ಕರ್ನಾಟಕದ ವಿಮೋಚಕ,
ಅಮೂಲ್ ನ ಉತ್ಪಾದಕ ?.
ನಮ್ಮೀ ಸರದಾರ? ನಮ್ಮೀ ಸರದಾರ?..

ಸ್ವಾತಂತ್ರ ದೇಶಭಕ್ತಿಗಳ ಸಂಜಾತ ,
ರಣರಂಗದ ಕಲಿ, ಮಹತ್ವಾಕಾಂಶಿಯ ಸಲಿ
ನಮ್ಮೀ ಸರದಾರ?, ನಮ್ಮೀ ಸರದಾರ?..
ನಮ್ಮ ಸರ್ದಾರ್ ವಲ್ಲಭಾಯಿ ಪಟೇಲಾ....

ಶ್ರೀ ಅಮರೇಶ್ ಹೂಗಾರ್ ಶಿಕ್ಷಕರು

# ನಾಗರಡ್ಡಿಕ್ಯಾಂಪ್ ಸರಕಾರಿ ಕಿರಿಯ ಪ್ರಾಥಮಿಕ ಶಾಲಾಕಟ್ಟಡ ಉದ್ಘಾಟನೆ

❑ ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಪಟ್ಟಣದ ಸಮೀಪದ ಗೌಢನಭಾವಿವಲಯದ ನಾಗರೆಡ್ಡಿಕ್ಯಾಂಪ್‌ನಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 2021-22 ನೇಸಾಲಿನ ಕಲಬುರ್ಗಿ ಕಲ್ಯಾಣ-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಯೋಜನೆಯಡಿಯಲ್ಲಿ ಸುಮಾರು 40.04 ಲಕ್ಷ ರೂಪಾಯಿಗಳ ನಿರ್ಮಿಸಲಾದ 3 ಕೊಠಡಿಗಳನ್ನು ಈ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಹನುಮಂತಪ್ಪ, ಹಾಗೂ ಯುವಮುಖಂಡ ಸತೀಶಗೌಡ ಉದ್ಘಾಟಿಸಿದರು.



ಶಾಲೆಯ ಮುಖ್ಯ ಗುರು ನಜೀರ್, ಸಿಆರ್‌ಸಿ ನಾಗರಾಜ, ಪಿಡಿಓ ವಸಂತಗೀತಾ, ಸೇರಿ ಎಸ್‌ಡಿಎಂಸಿ ಪದಾಧಿಕಾ-ರಿಗಳು,ಮುಖಂಡರು ಗ್ರಾಪಂಸದಸ್ಯರು ಮತ್ತಿತರರು ಇದ್ದರು.

# ಮಸ್ಕಿ ಯೋಜನಾ ಪ್ರಾಧಿಕಾರ ಅಧ್ಯಕ್ಷರಾಗಿ ಆರ್ ಸಿದ್ದನಗೌಡ ತುರ್ವಿಹಾಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಮೊನ್ನೆ ತಾನೇ ನೂತನ ಯೋಜನಾ ಪ್ರಾಧಿಕಾರ ಆರಂಭವಾಯಿತು ನಗರಾಭಿವೃದ್ಧಿ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಬೈರತಿ ಸುರೇಶ್ ಅವರು ಮಸ್ಕಿ ನಗರ ಯೋಜನ ಪ್ರಾಧಿಕಾರ ನೂತನ.



ಅಧ್ಯಕ್ಷರನ್ನಾಗಿ ಮಸ್ಕಿ ಕ್ಷೇತ್ರದ ಜನಪ್ರಿಯ ಶಾಸಕರಾದ ಆರ್ ಬಸನಗೌಡ ತುರವಿಹಾಳ ಅವರ ಸಹೋದರರಾದ ಆರ್ ಸಿದ್ದನಗೌಡ ತುರುವಿಹಾಳ ಇವರನ್ನು ನೇಮಕ ಮಾಡಿ ಆದೇಶ ಪತ್ರ ವಿತರಿಸಿದರು ಆರ್ ಸಿದ್ದನಗೌಡ ತುರ್ವಿಹಾಳ ಅವರು ಮಸ್ಕಿ ಯೋಜನಾ ಪ್ರಾಧಿಕಾರದ ಮೊದಲ ಅಧ್ಯಕರು ಕೂಡಾ ಹೌದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕುರ್ಡಿ ಗ್ರಾಮದ ರೈತರಿಗೆ ಹತ್ತಿ ಕಟ್ಟಿಗೆ ಚೇದಕ ಯಂತ್ರದ ಪ್ರಾತ್ಯಕ್ಷಿಕೆ ಹಾಗೂ ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಸಮಗ್ರ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ತಾಲೂಕಿನ ಕುರ್ಡಿ ಗ್ರಾಮದ ವೃತ್ತದಲ್ಲಿನ ಪ್ರಗತಿ ಪರ ರೈತ ವೆಂಕಟೇಶರೆಡ್ಡಿ ರವರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕುರ್ಡಿ ರೈತ ಸಂಪರ್ಕ ಕೇಂದ್ರ ಸಂಯುಕ್ತಾಶ್ರಯದಲ್ಲಿ ನಡೆದ ಹತ್ತಿ ಕಟ್ಟಿಗೆ ಛೇದಕ ಯಂತ್ರದ ಪ್ರಾತ್ಯಕ್ಷಿಕೆ ಹಾಗೂ ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಸಮಗ್ರ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ ಕುರಿತು ನಡೆದ ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ತಿಮ್ಮಣ್ಣ ಮಾತನಾಡಿ ಅಖಿಲ ಭಾರತ ಹತ್ತಿ ಸಂಶೋಧನ ಕೇಂದ್ರ ನಾಗಪುರ್ ವತಿಯಿಂದ ಕೃಷಿ ವಿಜ್ಞಾನ.

ಕೇಂದ್ರಕ್ಕೆ ಅತಿ ಸಾಂದ್ರತೆ ಹತ್ತಿ ಬೆಳೆ ವಿಧಾನದ ಕುರಿತು ಪರಿಶೀಲನೆಗಾಗಿ ರಾಜ್ಯದ ರಾಯಚೂರು ಕೃಷಿ ವಿಜ್ಞಾನ ಕೇಂದ್ರ ಹಾಗೂ ಧಾರವಾಡ ಕೃಷಿ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಯೋಜನೆಯನ್ನು ನೀಡಿದ್ದು ಈ ಅಧಿಕ ಸಾಂದ್ರತೆ ಹತ್ತಿ ಬೆಳೆ ಪದ್ದತಿಯಲ್ಲಿ ಅಧಿಕ ಸಾಂದ್ರತೆ ಹತ್ತಿ ಬೆಳೆ ಪದ್ದತಿಗೆ ಸೂಕ್ತವಾದ ಹತ್ತಿ ಬೀಜಗಳನ್ನು ಗಿಡದಿಂದ ಗಿಡಕ್ಕೆ 150 ಸೆ,ಮಿ. ಹತ್ತಿರದಲ್ಲಿ ಬೀಜಗಳನ್ನು ನಾಟಿ ಮಾಡುವುದರಿಂದ 120 ದಿನಗಳಲ್ಲಿ ಹತ್ತಿ ಬೆಳೆಯಲ್ಲಿ ಎರಡು ಬಾರಿ ಹತ್ತಿಯನ್ನು ಬಿಡಿಸಿಕೊಳ್ಳಬಹುದು ಕಡಿಮೆ ಸಮಯದಲ್ಲಿ ಹತ್ತಿ ಬೆಳೆ ಅವಧಿ ಮುಗಿಯುವುದರಿಂದ ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿಕೊರಕಾದ




ಬಾದೆಯನ್ನು ತಪ್ಪಿಸಬಹುದು. ಈ ಪದ್ದತಿಯಲ್ಲಿ ಬೆಳೆದ ಹತ್ತಿ ಬೆಳೆಗೆ ಚಾಮತ್ಕರ ದ್ರಾವಣವನ್ನು ಸಿಂಪಡಿಸಿ ಹತ್ತಿಗಿಡ ಎತ್ತರ ಬೆಳೆಯುವುದನ್ನು ತಡೆಯುವುದರಿಂದ ಬೆಳೆಗೆ ನಾವು ನೀಡುವ ಎಲ್ಲಾ ಪೋಷಕಾಂಶಗಳು ಸಮಗ್ರವಾಗಿ ಹತ್ತಿ ಗಿಡಕ್ಕೆ ತಲುಪಿ ಹೆಚ್ಚು ಗುಣಮಟ್ಟದ ಹತ್ತಿ ಕಾಯಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ,

ಹತ್ತಿ ಬೆಳೆಗೆ ನೀಡುವ ನೀರಿನ ಹಾಗೂ ಗೊಬ್ಬರ, ಸಮಯದ ಉಳಿತಾಯವಾಗುವುದರೊಂದಿಗೆ ಕಳೆದ ಬಾರಿ ರೈತ ವೆಂಕಟರೆಡ್ಡಿಯವರು ಎಕರೆಗೆ 18 ಕ್ವಿಂಟಾಲ್ ವರೆಗೆ ಕಡಿಮೆ ಕೃಷಿ ವೆಚ್ಚದಲ್ಲಿ ಹೆಚ್ಚಿನ ಇಳುವ-ರಿಯನ್ನು ಪಡೆದಿರುವುದನ್ನು ಕಾಣಬಹುದಾಗಿದೆ ಮುಂದಿನ ಬೆಳೆಗಳಾದ ಕಡ್ಲೆ, ಸೇರಿದಂತೆ ವಿವಿಧ ಬೆಳೆಗಳನ್ನು ಪಡೆಯಬಹುದು. ಈ ಪದ್ದತಿ ಅಳವಡಿಸಿಕೊಳ್ಳುವ ರೈತರಿಗೆ ಎಕರೆಗೆ 4 ಸಾವಿರದವರೆಗೆ ಸಹಾಯಧಾನ ಕೂಡ ದೊರೆಯುತ್ತದೆ. ರೈತರು ಹತ್ತಿಬೆಳೆಯಲ್ಲಿ ಹತ್ತಿ ಇಳುವರಿಯನ್ನು ಪಡೆದನಂತರ ಉಳಿಯುವ ಹತ್ತಿ ಕಟ್ಟಿಗೆ ತ್ಯಾಜ್ಯವನ್ನು ಬೆಂಕಿ ಇಟ್ಟು ಸುಡುವುದರಿಂದ ಭೂಮಿಯಲ್ಲಿರುವ ಬೆಳೆಗಳಿಗೆ ಉಪಕಾರಿಯಾಗಿರುವ ಅನೇಕ ಸೂಕ್ಷ್ಮ ಜೀವಿಗಳು ನಾಶವಾಗುತ್ತವೆ ಹಾಗೂ ಪರಿಸರದಲ್ಲಿ ಇಂಗಾಲದ ಡೈ ಆಕ್ಸೈಡ್, ಮೋನಾಕ್ಸಯಡ್ ಹೆಚ್ಚಿನ ಪ್ರಮಾಣದಲ್ಲಿ ಸೇರಿ ವಾಯು ಮಾಲಿನ್ಯ ಉಂಟಾಗುವುದರಿಂದ ಅನೇಕ ಶ್ವಾಸಕೋಶ ಕ್ಯಾನ್ಸರ್ ರೋಗಗಳು ಉಂಟಾಗುತ್ತವೆ ಅದ್ದರಿಂದ ರೈತರು ಹತ್ತಿ ಛೇದಕಗಳನ್ನು ಬಳಸಿ ಹತ್ತಿ ಕಟ್ಟಿಗೆಯನ್ನು ಪುಡಿ ಮಾಡಿ ಮರಳಿ ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತಾತೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕುರ್ಡಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಡಾ.ಶಿವಶಂಕರ ಮಾತನಾಡಿ ಕೃಷಿ ಇಲಾಖೆಯಿಂದ ರೈತರಿಗೆ ಅಧುನಿಕ ಯಂತ್ರಿಕೃತ ಕೃಷಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಸಹಾಯಧನದಡಿಯಲ್ಲಿ ಖರೀದಿ ಮಾಡುವುದಕ್ಕೆ ಅವಕಾಶವಿದೆ ,ರೈತರಿಗೆ ಅಗತ್ಯವಿರುವ ಕೃಷಿ ಪರಿಕಾರಗಳು ಹಾಗೂ ಕೃಷಿ ಕುರಿತು ಅಗತ್ಯ ಮಾಹಿತಿಯನ್ನು ರೈತರು ಪಡೆದುಕೊಂಡು ಕಡಿಮೆ ಕೃಷಿ ವೆಚ್ಚದಲ್ಲಿ ಅಧಿಕ ಇಳುವ-ರಿಯನ್ನು ಪಡೆಯುವ ಮೂಲಕ ರೈತರು ತಮ್ಮ ಕೃಷಿ ಅದಾಯದವನ್ನು ದ್ವಿಗುಣ ಮಾಡಿಕೊಳ್ಳುವಂತೆ ತಿಳಿಸಿದರು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕೀಟಶಾಸ್ತ್ರಜ್ಞರಾದ ಡಾ.ಶ್ರೀವಾಣಿ ರೈತರಿಗೆ ಗುಲಾಬಿ ಕಾಯಿಕೊರಕದ ಸಮಗ್ರ ನಿರ್ವಹಣೆ ಕುರಿತು ಅಗತ್ಯ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿಗಳಾದ ಡಾ.ಉಮೇಶ, ಡಾ.ಆಸ್ನನ, ಕುರ್ಡಿ ರೈತ ಸಂಪರ್ಕ ಕೇಂದ್ರದ ಅತ್ಮಯೋಜನೆಯ ಕೃಷಿ ತಾಂತ್ರಿಕ ವ್ಯವಸ್ಥಾಪಕರಾದ ಫಯಾಜ್ ಜಾಲಾಲ್, ಹುಲಿಗೆಪ್ಪ, ಲಕ್ಷ್ಮಣ ಗೋರ್ಕಾಲ್, ಕೃಷಿ ಸಖೀ ದೇವಮ್ಮ , ಗ್ರಾಮದ ರೈತರಾದ ಮನೋಜಗೌಡ, ಮಾರೇಶ, ಯಲ್ಲಪ್ಪ ಸೇ-ರಿದಂತೆ ನೂರಾರು ರೈತರು ಭಾಗವಹಿಸಿ ಕೃಷಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು. ಮಾನ್ವಿ: ತಾಲೂಕಿನ ಕುರ್ಡಿ ಗ್ರಾಮದ ವೃತ್ತದಲ್ಲಿನ ಪ್ರಗತಿ ಪರ ರೈತ ವೆಂಕಟೇಶರೆಡ್ಡಿ ರವರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕೃಷಿ ಇಲಾಖೆಯಿಂದ ಹತ್ತಿ ಛೇದಕ ಯಂತ್ರದ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಮಾನ್ವಿ: ತಾಲೂಕಿನ ಕುರ್ಡಿ ಗ್ರಾಮದ ವೃತ್ತದಲ್ಲಿನ ಪ್ರಗತಿ ಪರ ರೈತ ವೆಂಕಟೇಶರೆಡ್ಡಿ ರವರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ತಿಮ್ಮಣ್ಣ ಅಧಿಕ ಸಾಂದ್ರತೆ ಹತ್ತಿ ಬೆಳೆ ಪದ್ದತಿ ಕುರಿತು ಮಾಹಿತಿ ನೀಡಿದರು.

# ನಿತ್ಯ ಹರಿಸ್ಮರಣೆಯಿಂದ ಇಷ್ಟಾರ್ಥಗಳು ಸಿದ್ದಿಯಾಗುತ್ತವೆ: ಭೀಮಸೇನಾಚಾರ್ಯ ನವಲಿ



❑ ನೈಜ್ಯ ದೆಸೆ ನ್ಯೂಸ್

ಕಲಿಯುಗದಲ್ಲಿ ಹೋಮ ಹವನ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತಿಯಿಂದ ಭಜನೆ ಮಾಡುವ ಮೂಲಕ ಆಧ್ಯಾತ್ಮಿಕವಾಗಿ ಸಾಧನೆಯನ್ನು ಮಾಡಬಹುದಾಗಿದೆ. ಜೀವನದಲ್ಲಿ ಬರುವ ಸಮಸ್ಯೆಗಳಿಗೆ ನಿರಂತರ ಹರಿಸ್ಮರಣೆ ಎಲ್ಲಾ ಆಪತ್ತುಗಳನ್ನು ಪರಿಹರಿಸಿ ಇಷ್ಟಾರ್ಥಗಳ ಪ್ರಾಪ್ತಿಯ ಜೊತೆಗೆ ಮನಶಾಂತಿ ನೆಮ್ಮದಿ ದೊರೆಯಲಿದೆ ಎಂದು ವಶಿಷ್ಠಧಾಮ ಸೇವಾ ಟ್ರಸ್ಟ್ ಅಧ್ಯಕ್ಷ ಭೀಮಸೇನಾಚಾರ್ಯ ನವಲಿ ಹೇಳಿದರು.

ಸಿಂಧನೂರು ನಗರದ ಉಪ್ಪಾರವಾಡಿಯ ವಶಿಷ್ಠಧಾಮದಲ್ಲಿ ಜರುಗಿದ ಕಾರ್ತಿಕ ದೀಪೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಹನಮ ಮಾಲಾಧಾರಣ ಭಕ್ತರು ಭಕ್ತಿಯ ಭಜನೆ ಆಚರಣೆಗಳಿಂದ ವಿಶೇಷ ಆಂಜನೇಯ ಕೃಪೆಗೆ ಪಾತ್ರರಾಗಿದ್ದಾರೆ. ವಶಿಷ್ಠಧಾಮ ಸೇವಾ ಟ್ರಸ್ಟ್‌ನವತಿಯಿಂದ ಪ್ರತಿ ತಿಂಗಳು ಧಾರ್ಮಿಕ ಸಾಂಸ್ಕೃತಿ-ಕ ಕಾರ್ಯಕ್ರಮಗಳು ಜನ ಸಾಮಾನ್ಯರಲ್ಲಿ ಸನಾತನ ಧರ್ಮ ಜಾಗೃತಿಯ ಸಂದೇಶಗಳನ್ನು ಸಾರುತ್ತಿವೆ. ಸನಾತನ ಧಾರ್ಮೀಕ ಆಚ-ರಣೆಗಳು ವೈಜ್ಞಾನಿಕವಾಗಿದೆ ಎಂದರು.

ವಶಿಷ್ಠಧಾಮದಲ್ಲಿ ಕಾರ್ತಿಕ ಮಾಸ ಕೊನೆಯ ಸೋಮವಾರ ಪ್ರಯುಕ್ತ ಭಕ್ತರಿಂದ ಸಾಮೂಹಿಕ ರುದ್ರಾಭೀಷೇಕ, ಮಹಿಳೆಯ-ರಿಂದ ಕುಂಕುಮಾರ್ಚನೆ ಹಾಗೂ ಕಾರ್ತಿಕ ದೀಪೋತ್ಸವ ಧಾರ್ಮಿಕ ಕಾರ್ಯಕ್ರಮಗಳನ್ನು ಸತ್ಯನಾರಾಯಣಾಚಾರ್ಯ ನವಲಿ, ಭಾರದ್ವಾಜ ಉಪ್ಪಳ ನೇರವೇರಿಸಿದರು. ಈ ಸಂದರ್ಭದಲ್ಲಿ ಸಣ್ಣಮಲ್ಲಪ್ಪ ಮಾಡಿಗಿರಿ ಮತ್ತು ವಿರೇಶ ಅವರಿಗೆ ಸನ್ಮಾನಿಸಲಾಯಿತು. ಹನುಮಂತಾಚಾರ್ಯ ಮತಾಧಿಕಾರ, ರಾಘವೇಂದ್ರರಾವ್ ಕುಲಕರ್ಣಿ, ವೆಂಕಟರಾವ್ ಬಂಡಿ, ವಿರುಪಣ್ಣ ಗುಡಿ, ಉಮೇಶ ಗೋಮರ್ಸಿ, ಬಸವರಾಜ ಕೆಸರಟ್ಟಿ, ಕೃಷ್ಣಾ ಮಲಕಸಮುದ್ರ, ಪ್ರಭಾಕರ ದೇಶಪಾಂಡೆ, ಶ್ರೀನಿವಾಸ ಕುಲಕರ್ಣಿ ಮಹಿಳಾ ಭಜನಾ ಮಂಡಳಿಯ ಸದಸ್ಯರಾದ ಶೋಭಾ ನವಲಿ, ಸನ್ನಿಧಿ, ಲಕ್ಷ್ಮೀ, ಸುಮಿತ್ರಾ, ಅನುರಾಧ ಮುಂತಾದವರು ಉಪಸ್ಥಿತರಿದ್ದರು.

# ಶ್ರೀ ಸೂಗೂರೇಶ್ವರ ಜಾತ್ರಾ ಮಹೋತ್ಸವ ನ.24 ರಿಂದ ನಡೆಯಲಿದೆ*

❑ ನೈಜ್ಯ ದೆಸೆ ನ್ಯೂಸ್

ಅರಕೇರಾ: ಪಟ್ಟಣದ ಭಕ್ತರ ಆರಾಧ್ಯ ದೈವ ಶ್ರೀ ಸೂಗೂರೇಶ್ವರ ಜಾತ್ರಾ ಮಹೋತ್ಸವ ನ.24 ರಿಂದ ನ.28 ರವರೆಗೆ ಶ್ರೀ ಚಂದ್ರಶೇಖರಯ್ಯ ಸ್ವಾಮಿ ಹಿರೇಮಠ ಸಾನಿಧ್ಯದಲ್ಲಿ ಜರುಗಲಿದೆ. ನ.24 ರಂದು ಸಾಯಂಕಾಲ ಸಹಸ್ರ ದೀಪೋತ್ಸವ, ನ.25 ಬೆಳಗಿನ ಜಾವ ಊಟಿ ಬಸವೇಶ್ವರದಿಂದ ಮತ್ತು ಗಂಗಾಸ್ಥಳದಿಂದ ಊರ ನಾರಿಯರು ತಂದ ಉದಕದಿಂದ



ದೇವರಿಗೆ ಅಭಿಷೇಕ ಮಾಡಲಾಗುವುದು.

ಬೆ.11.30 ರಿಂದ ಶಾಲಾ ಮಕ್ಕಳಿಂದ ರಂಗೋಲಿ ಸ್ಪರ್ಧೆ, ಮಧ್ಯಾಹ್ನ ಎಲೆ ಪೂಜೆ, ಗಣಾರಾಧನೆ, ಸಂಜೆ 5 ಗಂಟೆಯಿಂದ ಕಳಸಗಳು ಗಂಗಾ ಸ್ಥಳದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಡವು, ವಚನ, ನಂದಿಕೋಲು ಸೇವೆಯೊಂದಿಗೆ ಮೆರವಣಿಗೆ ನಡೆಸಲಾಗುವುದು. ನಂತರ ಉತ್ಸವ ಜರುಗಲಿದೆ. ನ.26 ರಂದು ಬೆ.6 ರಿಂದ 8 ಗಂಟೆವರೆಗೆ ಕಳಸದ ಸೇವೆ ಹಾಗೂ ಶಿಖರದ ಮೇಲೆ ಕಳಸಗಳನ್ನು ಕೂಡಿಸಲಾಗುವುದು. ಸಂಜೆ 6.30 ಕ್ಕೆ ಮಹಾರಥೋತ್ಸವ ಜರುಗಲಿದೆ.

ನ.27 ರಂದು ಬೆ.8 ಗಂಟೆಯಿಂದ ಶ್ರೀ ಅರಕೇರಾ ಬಸವಣ್ಣ ದೇವರಿಗೆ ಪೂಜೆ ಸಲ್ಲಿಸಿ ಹುಸಿ ಚೆಂಡು ತರುವುದು. ಸಾಯಂಕಾಲ 4.30 ರ ನಂತರ ಕಡುಬಿನ ಕಾಳಗ ಹಾಗೂ ಸಂಗ್ರಹಣೆ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿದೆ. ನ.28 ರಂದು ಕಳಸದ ಪೂಜೆ ನಡೆಯಲಿದೆ ಎಂದು ದೇವಸ್ಥಾನ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

# ಫೆಡರಲ್ ಶಿಕ್ಷಣ ಸಂಸ್ಥೆವತಿಯಿಂದ ಅಂಧತ್ವವುಳ್ಳ ಮಕ್ಕಳಿಗೆ ದಿನನಿತ್ಯ ಉಪಯೋಗಿಸುವ ವಸ್ತುಗಳ ವಿತರಣೆ



❑ ನೈಜ್ಯ ದೆಸೆ ನ್ಯೂಸ್

ಯರಮರಸನಲ್ಲಿರುವ ಫೆಡರಲ್ ಶಿಕ್ಷಣ ಸಮೂಹಗಳ ವತಿಯಿಂದ ದಿನಾಂಕ: 19/11/2025 ರಂದು ಮಾಣಿಕ್ ಪ್ರಭು ದೇವಸ್ಥಾನದ ಅಂಧತ್ವವುಳ್ಳ ಶಾಲಾ ಮಕ್ಕಳಿಗೆ ದಿನನಿತ್ಯ ಉಪಯೋಗಿಸುವ ವಸ್ತುಗಳ ಕಿಟ್‌ನ್ನು ವಿತರಿಸಲಾಯಿತು.

ಶಾಲೆಯ ಈ ಸಂಧರ್ಭದಲ್ಲಿ ಅಂ-ಧತ್ವವುಳ್ಳ ಶಾಲಾ ಮಕ್ಕಳಿಗೆ ಮುಖ್ಯಗುರುಗಳಾದ ಶ್ರೀಮತಿ.ರೇಖಾ ರವರು ಅಂಧತ್ವ ಮಕ್ಕಳ್ಳಲ್ಲಿ ಅಡಗಿರುವ ಪ್ರತಿಭೆ ಸಾಮನ್ಯ ಮಕ್ಕಳಿಗಿಂತ ಭಿನ್ನವಾಗಿದ್ದು ಕಂಡುಬರುತ್ತದೆ, ಈಗಾಗಿ ಸಾಮನ್ಯ ಮಕ್ಕಳ್ಳನ್ನು ಈ ಮಕ್ಕಳಿಗೆ ಹೋಲಿಸಿದಲ್ಲಿ ಸಂಪೂರ್ಣ ಪ್ರತಿಭೆ ಮತ್ತು ಚುರುಕುತನ ವ್ಯತ್ಯಸವಾಗಿ ಆಡುವಾದಗಲಿ, ಬರೆಯುವುದಾಗಲಿ, ಓದುವದಾಗಲಿ, ಕ್ರೀಡೆಯಲ್ಲಿಯಾಗಲಿ, ಸಾಮನ್ಯ ಸ್ಪರ್ದೆಗಳಲ್ಲಿ ಮುಂದಾಳತ್ವ ವಹಿಸಿರುವುದಕ್ಕೆ ಮನಸ್ಸಿನ ಏಕಾಗ್ರತೆಯೇ ಕಾರಣವೆಂದು ತಿಳಿಸಿದರು.

ಸಂಸ್ಥೆಯ ಅದ್ಯಕ್ಷರಾದ ಶ್ರೀ. ಮೊಹ್ಮದ್ ಅಬ್ದುಲ್ ಹೈ ಫೀರೋಜ್ ಮಾತನಾಡಿ ಸಂಸ್ಥೆಯು ಕೈಗೊಂಡ ಈ ಈ ಕಾರ್ಯಕ್ರಮವನ್ನು ಪ್ರಶಂಸಿದರು, ಕಾರ್ಯನಿರ್ವಾಹಕ ನಿರ್ದೇಶಕಿ ಕು. ಶ್ರೀಲೇಖಾ ಹಾಗೂ ಶಾಲಾ ಮುಖ್ಯಗುರುಗಳು ಈ ಒಂದು ಕಾರ್ಯಕ್ರಮ ನಮ್ಮ ಶಾಲಾ ಮಕ್ಕಳಿಗೆ ತಮ್ಮ ತನು, ಮನದಿಂದ ನೀಡಿದ ದಿನನಿತ್ಯ ಉಪಯೋಗಿಸುವ ವಸ್ತುಗಳು ಹಂಚಿಕೊಂಡಿರುವುದು ನಮಗೆ ಸಂತಸ ಮೂಡಿದೆ ಎಂದರು. ಅಂಧತ್ವವುಳ್ಳ ಮಕ್ಕಳ್ಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಕೊಂಡಡಿದಾರು. ಕೊನೆಗೆ ಆ ಸಂಸ್ಥೆಯ ಶಿಕ್ಷಕರಾದ ಶ್ರೀ ಕಿರಣ್ ವಂದನಾರ್ಪಣೆಯನ್ನು ನೆರವೇರಿಸಿದರು. ಹಾಗೂ ಫೆಡರಲ್ ಪಬ್ಲಿಕ್ ಶಾಲೆಯ ಸಹ ಶಿಕ್ಷಕಿಯರು-ಭೋದಕೇತ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಅಧ್ಯಕ್ಷತೆಯಲ್ಲಿ ಸಭೆ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪುರಸಭೆ ವ್ಯಾಪ್ತಿಯ 23 ವಾರ್ಡುಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆ ತಪ್ಪಿಸಲು ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ನೀರು ಪೂರೈಕೆ ಸ್ಥಗಿತಗೊಂಡ ನಂತರ ಐದು ದಿನಕ್ಕೊಮ್ಮೆ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡಲು ಬುಧವಾರ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಯಿತು.

ಮಸ್ಕಿ ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸದಸ್ಯರು ಜನವರಿ 10 ರಿಂದ ಕಾಲುವೆಗೆ ನೀರು ಬಂದ್ ಆಗುತ್ತದೆ. ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ತೊಂದರೆ




ಉಂಟಾಗುವ ಸಾಧ್ಯತೆ ಇದೆ. ಕೆರೆಗಳನ್ನು ಭರ್ತಿ ಮಾಡಿಕೊಳ್ಳುವ ಜೊತೆಗೆ ಪಟ್ಟಣದಲ್ಲಿನ 80 ಕ್ಕೂ ಹೆಚ್ಚು ಕೊಳವೆಭಾವಿಗಳ ಸ್ಥಿತಿಗತಿ ಪರಿಶೀಲಿಸಬೇಕು, ದುರಸ್ತಿಗೆ ಬಂದರೆ ಕೂಡಲೇ ಅವುಗಳನ್ನು ದುರಸ್ತಿಗೊಳಿಸಿ ಸನ್ನದ್ದ ಸ್ಥಿತಿಯಲ್ಲಿಟ್ಟುಕೊಳ್ಳಬೇಕು ಎಂದು ಸದಸ್ಯರು ಮುಖ್ಯಾಧಿಕಾರಿ ನರಸರೆಡ್ಡಿ ಅವರಿಗೆ ಸೂಚಿಸಿದರು. ಪಟ್ಟಣದ ರಸ್ತೆ ಪಕ್ಕ ಹಾಗೂ ವೃತ್ತಗಳಲ್ಲಿ ಅಳವಡಿಸುವ ಜಾಹಿರಾತು ಬ್ಯಾನರ್ ಗಳನ್ನು ಭಹಿರಂಗ ಹರಾಜು ಮೂಲಕ ಖಾಸಗಿ ಗುತ್ತಿಗೆದಾರ-ರಿಗೆ ನೀಡಲು ಸಭೆಯಲ್ಲಿ ತಿರ್ಮಾನಿಸಲಾಯಿತು.

ವಾರ್ಡ್ ಗಳಲ್ಲಿ ಕುಡಿಯುವ ನೀರು, ಬೀದಿ ದೀಪಗಳ ಅಳವಡಿಕೆ, ಚರಂಡಿ ಸ್ವಚ್ಚತೆ ಬಗ್ಗೆ ಪುರಸಭೆ ಅಧಿಕಾರಿಗಳು ಹೆಚ್ಚು ಗಮನ ಕೊಡಬೇಕು ಎಂದು ಕೆಲವು ಸದಸ್ಯರು ಆಗ್ರಹಿಸಿದರು. ಪಟ್ಟಣದ ಹೆದ್ದಾ-ರಿಯಲ್ಲಿ ಬಿಡಾಡಿ ದನಗಳ ಹಾಗೂ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಅವುಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮತ್ತೆ ಕೆಲವು ಸದಸ್ಯರು ಸಭೆಯಲ್ಲಿ ಒತ್ತಾಯಿಸಿದ ಘಟನೆ ನಡೆಯಿತು.

ಪುರಸಭೆ ವ್ಯಾಪ್ತಿಯಲ್ಲಿ ಬರುವ ಜಮೀನು ಸರ್ವೆ ನಂ 238/8, 402/1. 402/2, 402/3, 402/4, 402/5, 251/1, 92/1,103/4, 13/2 ರಲ್ಲಿ ಬಿನ್‌ಶೇತ್ಕಿ ಹೊಂದಿ, ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಗೊಂಡ ವಿನ್ಯಾಸಗಳಿಗೆ ಸಭೆಯಲ್ಲಿ ಆಡಳಿತಾತ್ಮಕ ಒಪ್ಪಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಗೀತಾ ಶಿವರಾಜ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಚೇತನ ಪಾಟೀಲ, ಮುಖ್ಯಾಧಿಕಾರಿ ನರಸರೆಡ್ಡಿ ಸೇರಿದಂತೆ ಅನೇಕ ಸದಸ್ಯರು, ಪುರಸಭೆಯ ವಿವಿಧ ವಿಭಾಗದ ಅಧಿಕಾರಿಗಳು ಇದ್ದರು.

## ನೇಮಕಾತಿ ಪ್ರಕಟಣೆ

**ESIC ಕರ್ನಾಟಕ ನೇಮಕಾತಿ 2025 41 ಹಿರಿಯ ನಿವಾಸಿ ಹುದ್ದೆಗಳಿಗೆ ವಾಕ್-ಇನ್ ಸಂದರ್ಶನ ESIC ಕರ್ನಾಟಕ ನೇಮಕಾತಿ 2025: 41 ಹಿರಿಯ ನಿವಾಸಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ನೌಕರರ ರಾಜ್ಯ ವಿಮಾ ನಿಗಮ ಕರ್ನಾಟಕ ನವೆಂಬರ್ 2025 ರ ESIC ಕರ್ನಾಟಕದ ಅಧಿಕೃತ ಅಧಿಸೂಚನೆಯ ಮೂಲಕ ಹಿರಿಯ ನಿವಾಸಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕಲಬುರಗಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 24-ನವೆಂಬರ್-2025 ರಂದು ವಾಕ್-ಇನ್-ಸಂದರ್ಶನಕ್ಕೆ ಹಾಜರಾಗಬಹುದು. ಇಖಐಅ ಕರ್ನಾಟಕದ ಅಧಿಕೃತ ಅಧಿಸೂಚನೆ ಅಭ್ಯರ್ಥಿಯು ಯಾವುದೇ ಮಾನ್ಯತೆ ಪಡೆದ ಮಂಡಳಿಗಳು ಅಥವಾ ವಿಶ್ವವಿದ್ಯಾಲಯಗಳಿಂದ MD/ MS/ DNB, ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿರಬೇಕು. Official Website: esic.gov.in ಕೊನೆಯ ದಿನಾಂಕ 24-ನವೆಂಬರ್-2025**

## ಆರೋಗ್ಯ ಉಚಿತ ತಪಾಸಣೆ ಶಿಬಿರ

❑ ನೈಜ್ಯ ದೆಸೆ ನ್ಯೂಸ್

**ಮೆದಕಿನಾಳ ಪ್ರಾಥಮಿಕ ಆರೋಗ್ಯ ಕೇಂದ್ರ, ಜಕ್ಕೇರಮಡು ಆರೋಗ್ಯ ಉಪ ಕೇಂದ್ರ, ಮಟ್ಟೂರು ಗ್ರಾಮದ ಸರ್ಕಾರಿ ಆಯುರ್ವೇದ ಕೇಂದ್ರದ ವೈದ್ಯಾಧಿಕಾರಿಗಳು, ಸಿಬ್ಬಂದಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಿದರು. ರಕ್ತದೊತ್ತಡ, ಸಕ್ಕರೆ ಕಾಯಿಲೆ ತಪಾಸಣೆ ನಡೆಸಿ ಉಚಿತವಾಗಿ ಔಷಧ ವಿತರಿಸಿದರು.**



ಡಾ.ಮಹೇಂದ್ರ ಪಾಟೀಲ್, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕಿರಣ್, ಬಸವರಾಜ್, ಸಮುದಾಯ ಆರೋಗ್ಯ ಅಧಿಕಾರಿಗಳಾದ ಸುರೇಶ್, ಅಶೋಕ್, ಮೀನಾಕ್ಷಿ, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿ ವಿಜಯಲಕ್ಷ್ಮೀ, ಮಟ್ಟೂರು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಡಾ. ಡಿ.ಎಚ್.ಹುಲ್ಲೂರು, ಗೊರೇಬಾಳ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಡಾ. ಹೀರಾಬಾಯಿ, ಲಿಂಗಮ್ಮ, ಗಾಯತ್ರಿ, ನಂದಕಿಶೋರ್, ಶ್ರೀನಿವಾಸ್ ಸೇರಿದಂತೆ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

1ನೇ ಪುಟದಿಂದ....

4%ನಿಂದ 7%ಕ್ಕೆ ಹೆಚ್ಚಿಸಬೇಕೆಂದು ಶಿಫಾರಸ್ಸು ಮಾಡಿತ್ತು. ನ್ಯಾಯಾಲಯ ಹೇಳಿದ್ದೇನು ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಲಿರುವ ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೀಟುಗಳನ್ನು ಕಾಯ್ದಿರಿಸುವಾಗ ಮಹಾರಾಷ್ಟ್ರ ಸರ್ಕಾರವು ನ್ಯಾಯಾಲಯದ ಅಧಿಕಾರವನ್ನು ಪ್ರಶ್ನಿಸಬಾರದು ಮತ್ತು 50% ಮಿತಿಯನ್ನು ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಕೆ.ಕೃಷ್ಣಮೂರ್ತಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸಂವಿಧಾನ ಪೀಠವು ನಿಗದಿಪಡಿಸಿದ ಶೇ. 50ರ ಮಿತಿಯೊಳಗೆ ಒಬಿಸಿ ಕೋಟಾ ಉಳಿದರೆ ಮಾತ್ರ ಚುನಾವಣೆಗಳನ್ನು ಮುಂದುವರಿಸಲು ನ್ಯಾಯಾಲಯ ಅನುಮತಿ ನೀಡುತ್ತದೆ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ಜೋಯಲ್ಯ ಬಾಗ್ಚಿ ಅವರ ಪೀಠ ತಿಳಿಸಿತ್ತು. ಮಹಾರಾಷ್ಟ್ರದ ಪರವಾಗಿ ವಾದ ಮಂಡಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಚುನಾವಣಾ ಪ್ರಕ್ರಿಯೆಗೆ ಅವಕಾಶ ನೀಡುವಂತೆ ನ್ಯಾಯಾಲಯವನ್ನು ಒತ್ತಾಯಿಸಿದ್ದರು. ಸಾಂವಿಧಾನಿಕ ಪೀಠದ ತೀರ್ಪು ತುಂಬಾ ಸ್ಪಷ್ಟವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಲಂಬ ಮೀಸಲಾತಿ 50% ಮೀರಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಬಾಗ್ಚಿ ಟೀಕಿಸಿದರು. ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್, 2022ರ ಜೆಕೆ ಬಂಥಿಯಾ ಆಯೋಗದ ವರದಿಯ ಪ್ರಕಾರ ರಾಜ್ಯವು ಚುನಾವಣೆಗಳನ್ನು ನಡೆಸುತ್ತಿದೆ, ಅದು ಒಬಿಸಿಗಳಿಗೆ 27% ಕೋಟಾವನ್ನು ಶಿಫಾರಸು ಮಾಡಿದೆ. ಇದರಿದ ಒಟ್ಟು ಮೀಸಲಾತಿ ಶೇ.70ಕ್ಕೆ ಏರುತ್ತದೆ ಎಂದು ಅವರು ವಾದಿಸಿದರು. ಏನಿದು ಪ್ರಕರಣ.. ಮಹಾರಾಷ್ಟ್ರ ರಾಜ್ಯದಲ್ಲಿ ದೀರ್ಘಕಾಲದಿಂದ ವಿಳಂಬವಾಗಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಡಿಸೆಂಬರ್ 2025ರೊಳಗೆ ನಡೆಯಲಿವೆ.

## 100 ಉರ್ದು ಮಾಧ್ಯಮದ ಶಾಲೆಗಳಿಗೆ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ

# ರಾಯಚೂರು ಜಿಲ್ಲೆಯಲ್ಲಿ ಉನ್ನತೀಕರಿಸಿದ ಏಕೈಕ ಉರ್ದು ಪ್ರೌಢ ಶಾಲೆ (ಕವಿತಾಳ)

❑ ನೈಜ್ಯ ದೆಸೆ ನ್ಯೂಸ್

**ಶಿಕ್ಷಣ ಇಲಾಖೆಯಲ್ಲಿ ಅತಿ ಹೆಚ್ಚು ದಾಖಲಾತಿಯಿರುವ ಆಯ್ದ 100 ಉರ್ದು ಮಾಧ್ಯಮದ ಶಾಲೆಗಳಿಗೆ ಕರ್ನಾಟಕ ಪಬ್ಲಿಕ್ ಶಾಲೆ ಮಾದರಿಯಲ್ಲಿ ಮೂಲಸೌಕರ್ಯಗಳನ್ನು ಒದಗಿಸಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಿ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುವುದು. ಒಟ್ಟಾರೆ 400 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನವಾಗಲಿರುವ ಈ ಯೋಜನೆಗೆ ಈ ವರ್ಷದಲ್ಲಿ 100 ಕೋಟಿ ರೂ. ಒದಗಿಸಲಾಗಿದೆ.**

ಮೇಲೆ ಓದಲಾದ ಕ್ರ.ಸಂ.(2) ರ ಸರ್ಕಾರದ ಆದೇಶದಲ್ಲಿ 2025-26ನೇ ಸಾಲಿನ ಆಯವ್ಯಯ ಷಣ ಕಂಡಿಕೆ-215ರ ಘೋಷಣೆಯಂತೆ ಮುಖ್ಯಮಂತ್ರಿಗಳ ಅಲ್ಪ ಸಂಖ್ಯಾತರ ಕಾಲೋನಿ ವೃದ್ಧಿ ಯೋಜನೆಯಡಿ ಕಾಮಗಾರಿಗಳ ಅನುಷ್ಠಾನದ ಕುರಿತು ಲೆಕ್ಕಶೀರ್ಷಿಕ :4225-04?0-01 ನಗರ ಪ್ರದೇಶಗಳಲ್ಲಿನ ಅಲ್ಪಸಂಖ್ಯಾತರ ಸ್ಲಂ/ ಕಾಲೋನಿ ಅಭಿವೃದ್ಧಿ ಯೋಜನೆ ಗೂ ಲೆಕ್ಕಶೀರ್ಷಿಕೆ:4225-04-102-0-02 ಅಲ್ಪ ಸಂಖ್ಯಾತರಿಗಾಗಿ ಮುಖ್ಯಮಂತ್ರಿ ವಿಶೇಷ ವೃದ್ಧಿ ಯೋಜನೆಗಳಡಿ ಒದಗಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ ಪಿಸಿಕೊಂಡಿರುವ ಕ್ರಿಯಾ ಯೋಜನೆಯಲ್ಲಿ 2025-26ನೇ ಸಾಲಿನ ಆಯವ್ಯಯ ಭಾಷಣದ -2- ಮೇಲೆ ಓದಲಾದ ಕ್ರ.ಸಂ.(3) ರಲ್ಲಿನ ಕಡತದಲ್ಲಿ 2025-26ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ-213 ರ ಘೋಷಣೆಗೆ ಸಂಬಂಧಿಸಿದಂತೆ,



ಉದ್ದೇಶಿತ ಆಯ್ದ 100 ಉರ್ದು ಮಾ ಧ್ಯಮದ ಶಾಲೆಗಳಿಗೆ ಬೇಕಾಗುವ ಆವರ್ತಕ ಮತ್ತು ಅನಾವರ್ತಕ ವೆಚ್ಚದ ವಿವರಗಳನ್ನುಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯವರು ಸಲ್ಲಿಸಿರುತ್ತಾರೆ.

ಉರ್ದು ಮಾಧ್ಯಮದ ಶಾಲೆಗಳಿಗೆ ಕರ್ನಾಟಕ ಪಬ್ಲಿಕ್ ಶಾಲೆ ಮಾದ-ರಿಯಲ್ಲಿ ಸೌಕರ್ಯಗಳನ್ನು ಒದಗಿಸಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಿ. ಮೌಲಾನ ಆಜಾದ್ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸುವ ಕುರಿತಂತೆ ಆಯ್ದ 100 ಶಾಲೆಗಳ ಪ್ರಾಥಮಿಕ ವಿಭಾಗಕ್ಕೆ 470 ಕೊಠಡಿಗಳು ಹಾಗೂ ಪ್ರೌಢ ವಿಭಾಗಕ್ಕೆ 734 ಕೊಠಡಿಗಳು ಅವಶ್ಯಕತೆ ಇರುವುದಾಗಿ ತಿಳಿಸಿ, ಕೊಠಡಿ, ಶೌಚಾಲಯ, ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್ ವಿವರಗಳ Recurring & Nonrecurring ಒಟ್ಟು ವೆಚ್ಚ ರೂ.482.50 ಕೋಟಿಗಳ ಮೊತ್ತದ ರಾಜು ಪಟ್ಟಿಯಲ್ಲಿನ ಅಂಶಗಳನ್ನು ಪರಿಗಣಿಸಿ ಹಾಗೂ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:28.08.2025 ರಂದು ನಡೆದ ಸಭೆಯ ತೀರ್ಮಾನದಂತೆ ಹೆಚ್ಚು, ಸ್ಥಳಾವಕಾಶ ಲಭ್ಯವಿರುವ ಹಾಗೂ ಅಲ್ಪಸಂಖ್ಯಾತರ ಸಮುದಾಯದ ಹೆಚ್ಚು ಜನಸಂಖ್ಯೆ ವಾಸವಿರುವ ಪ್ರದೇಶಗಳಲ್ಲಿನ 100 ಉರ್ದು ಶಾಲೆ'ಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿ ಉನ್ನತೀಕರಿಸಿ ಮೌಲಾನಾ ಆಜಾದ್ ಮಾದರಿ ಶಾಲೆಗಳ ಮಾದ-ರಿಯಲ್ಲಿ ಉನ್ನತೀಕರಿಸಲು ಕ್ರಮವಹಿಸಬಹುದು.

ಮುಂದುವರೆದು, ದಿನಾಂಕ: 30.10.2025ರಂದು ಮಾನ್ಯ ವಸತಿ, ವಕ್ಸ್ ಮತ್ತು ಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ವರು ಅಧ್ಯಕ್ಷತೆಯಲ್ಲಿ ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ 3. ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಇಲಾಖೆಯ ಮುಖ್ಯಸ್ಥರೊಂದಿಗೆ ನಡೆದ ಯಲ್ಲಿ ತೀರ್ಮಾನಿಸಿದಂತೆ, ಶಿಕ್ಷಣ ಇಲಾಖೆಯಲ್ಲಿ ಅತೀ ಹೆಚ್ಚು ದಾಖಲಾತಿಯಿರುವ 100 ರ್ಎ ಮಾಧ್ಯಮದ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಆಯ್ಕೆ ಮಾಡಲು ರ್ವಾನಿಸಲಾಗಿರುತ್ತದೆ.

ಅದರಂತೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕ್ತಾಲಯದಿಂದ ಹೆಚ್ಚು ದಾಖಲಾತಿ ಇರುವ 100 ಉರ್ದು ಶಾಲೆಗಳ ಪಟ್ಟಿಯನ್ನು ಸಿರುವ ರೀತ್ಯಾ 100 ಉರ್ದು ಮಾಧ್ಯಮದ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಮಾಡಬೇಕಾಗಿರುತ್ತದೆ. ಆದ್ದ-ರಿಂದ, ಸದರಿ ಆಯವ್ಯಯ ಕಂಡಿಕೆ-213ರನ್ನು ಷ್ಠಾನಗೊಳಿಸಲು ಸೂಕ್ತ ಸರ್ಕಾರಿ ಆದೇಶ ಹೊರಡಿಸಬೇಕೆಂದು ಕೋರಿ ಮೇಲೆ ಓದಲಾದ 0(4)ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಸರ್ಕಾರಕ್ಕೆ ವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

"ಶಿಕ್ಷಣ ಇಲಾಖೆಯಲ್ಲಿ ಅತಿ ಹೆಚ್ಚು ದಾಖಲಾತಿಯಿರುವ ಆಯ್ದ 100 ಉರ್ದು ಮಾಧ್ಯಮದ ಶಾಲೆಗಳಿಗೆ ಕರ್ನಾಟಕ ಪಬ್ಲಿಕ್ ಶಾಲೆ ಮಾದರಿಯಲ್ಲಿ ಮೂಲಸೌಕರ್ಯಗಳನ್ನು ಒದಗಿಸಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಿ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಿ. ಒಟ್ಟಾರೆ 400 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನವಾಗಲಿರುವ ಈ ಯೋಜನೆಗೆ ಈ ವರ್ಷದಲ್ಲಿ 100 ಕೋಟಿ ರೂ. ಒದಗಿಸಲಾಗಿದೆ" ... ರಾಯಚೂರು ಜಿಲ್ಲೆಯ ಕವಿತಾಳ ಸರಕಾರಿ ಉರ್ದು ಶಾಲೆಗೆ ಕರ್ನಾಟಕ ಪಬ್ಲಿಕ್ ಶಾಲೆ ಮಾದರಿಯಲ್ಲಿ ಮೂಲಸೌಕರ್ಯ ಒದಗಿಸಿ ಮೌಲಾನ ಆಜಾದ್ ಪಬ್ಲಿಕ್ ಶಾಲೆಯನ್ನಾಗಿ ಉನ್ನತೀಕರಿಸಲಾಗಿದೆ..

# ವನಸಿರಿ ಪೌಂಡೇಷನ್ 114 ಸಸಿಗಳನ್ನು ನೆಟ್ಟು ಸಾಲುಮರದ ತಿಮ್ಮಕ್ಕನಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯ ಶ್ಲಾಘನೀಯ ಆರ್ ಬಸನಗೌಡ ತುರವಿಹಾಳ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಉಮಲೂಟಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವನಸಿರಿ ಪೌಂಡೇಷನ್ (ರಿ)ರಾಯಚೂರು ವತಿಯಿಂದ ಸಾಲುಮರದ ತಿಮ್ಮಕ್ಕ ಸ್ಮರಣಾರ್ಥ-ರ್ವಾಗಿ ಹಸಿರು ನಮನ ಕಾರ್ಯಕ್ರಮ ಹಾಗೂ 114 ಸಸಿ ನೆಡುವ ಕಾರ್ಯಕ್ರಮ ಅದ್ದೂ-ರಿಯಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಬಸನಗೌಡ ತುರವಿಹಾಳ ಅವರು ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಸಸಿಗಳನ್ನು ನೆಟ್ಟು ನೀರುಣಿಸುವ ಮೂಲಕ ಚಾಲನೆ ನೀಡಿದರು.**

ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತ ವನಸಿರಿ ಪೌಂಡೇಷನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರು ವಿದ್ಯಾರ್ಥಿಗಳೊಂದಿಗೆ ಒಂದೊಂದು ಗಿಡ ನೆಟ್ಟು ವೃಕ್ಷ ಮಾತೆಯ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ನಂತರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಆರ್ ಬಸನಗೌಡ ತುರವಿಹಾಳ ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಮಾತನಾಡಿ ತಿಮ್ಮಕ್ಕ ಅವರು ನಿಧನದ ಹಿನ್ನಲೆಯಲ್ಲಿ ಇಂದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ವನಸಿರಿ ಪೌಂಡೇಷನ್ ವತಿಯಿಂದ 114 ಗಿಡಗಳನ್ನು ನೆಡುವ ಕಾರ್ಯ ಮಾಡುತ್ತಿರುವವುದು ಶ್ಲಾಘನೀಯ. ಸಾಲುಮರದ ತಿಮ್ಮಕ್ಕ ಅವರು 114 ವರ್ಷಗಳ ಕಾಲದ ಜೀವಿತಾವಧಿಯಲ್ಲಿ ಮಾಡಿರುವ ಹಸಿರು ಕ್ರಾಂತಿ ಕಾರ್ಯ ಯಾವಾಗಲು ನಮ್ಮ ಮನದಲ್ಲಿ ಉಳಿಯುವಂತಹ ಕಾರ್ಯವಾಗಿದೆ.

ಪ್ರತಿಯೊಬ್ಬರೂ ಮನೆಗೊಂದು ಮರವನ್ನು ಬೆಳೆಸಿದರೆ ಸಾಲು ಮರದ ತಿಮ್ಮಕ್ಕ ಅವರ ಆಶಯವನ್ನು ಈಡೇರಿಸಿದಂತಾಗುತ್ತದೆ. ಮಕ್ಕಳಿಗೆ ಶಿಕ್ಷಣದ ಜೊತೆಗೆ ಪರಿಸರ ಜಾಗೃತಿ ಕೂಡಾ ಅಷ್ಟೇ ಮುಖ್ಯವಾಗಿದೆ. ಮಲೆನಾಡಿನ ಬದುಕೇ ಹಚ್ಚ ಹಸಿರಾಗಿರುತ್ತದೆ ಆ ಭಾಗದಲ್ಲಿ ಹಸಿರಿನ ವಾತಾವರಣ ನೋಡಲಿಕ್ಕೆ ಹೋಗುತ್ತೇವೆ ಆದರೆ ನಮ್ಮ ಭಾಗದಲ್ಲಿ ಅದೇ-ರೀತಿ ವಾತಾವರಣ ನಿರ್ಮಾಣ ಮಾಡುವ ಗು-ರಿಯನ್ನು ನಾವೆಲ್ಲರೂ ಹೊಂದಬೇಕು ಎಂದರು.

# ಶ್ರೀ ಮುರಹರಿ ಗೆಳೆಯರ ಬಳಗ ಮುಕುಂದ ವತಿಯಿಂದ ಕಾರ್ತಿಕ ಮಾಸದ ಶ್ರೀ ಮುರಹರಿ ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮೀಣ ಮಟ್ಟದ ಕಬಡ್ಡಿ ಪಂದ್ಯಾವಳಿ

❑ ನೈಜ್ಯ ದೆಸೆ ನ್ಯೂಸ್

**ಶ್ರೀ ಮುರಹರಿ ಗೆಳೆಯರ ಬಳಗದ ವತಿಯಿಂದ ಕಾರ್ತಿಕ ಮಾಸದ ಶ್ರೀ ಮುರಹರಿ ಜಾತ್ರಾ ಮಹೋತ್ಸವದ ಅಂಗವಾಗಿ ಮೊದಲ ಬಾರಿಗೆ ಗ್ರಾಮೀಣ ಮಟ್ಟದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿಯನ್ನು ಮುಕುಂದ ಗ್ರಾಮದಲ್ಲಿ ಭವ್ಯವಾಗಿ ಆಯೋಜಿಸಲಾಯಿತು. ಉದ್ಘಾಟನೆಯನ್ನು ಗ್ರಾಮ ಮುಖಂಡರಾದ ಶ್ರೀ ರುದ್ರಮುನಿ ಹಿರೇಮಠ ಅವರು ನೆರವೇರಿಸಿದ್ದು, ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ ಶ್ರೀ ರಾಜುಗೌಡರು ಕಬಡ್ಡಿ ಪಂದ್ಯಾವಳಿಯನ್ನು ವೀಕ್ಷಿಸಿ ಆಟಗಾರರಿಗೆ ಪ್ರೋತ್ಸಾಹ ನೀಡಿದರು.**






ಪ್ರಥಮ ಬಹುಮಾನವಾದ ರೂ. 3555 ಮತ್ತು ಟ್ರೋಫಿಯನ್ನು ಸಿಂಧನೂರು ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಅವರು ದೇಣಿಗೆಯಾಗಿ ನೀಡಿದ್ದು, ದ್ವಿತೀಯ ಬಹುಮಾನ ರೂ. 25555 ಅನ್ನು ಶ್ರೀ ಟಿ. ಮಲ್ಲಿಕಾರ್ಜುನ ಬಾರ್ಕೆರ್ (ಸಿಂಗಾಪುರ) ಹಾಗೂ ಶ್ರೀ ಮಲ್ಲೇಶಪ್ಪ ಸಾಹುಕಾರ್ (ಮುಕುಂದ) ಅವರು ವಹಿಸಿಕೊಂಡರು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಸಣ್ಣ ಯಶೋಧ (ಗಂ. ರಮೇಶ್) ಮಾತನಾಡಿ, ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಗ್ರಾಮೀಣ ಕ್ರೀಡೆಗಳ ಉತ್ತೇಜನಕ್ಕೆ ದೊಡ್ಡ ವೇದಿಕೆಯಾಗಿದೆ ಎಂದು ಪ್ರಶಂಶಿಸಿದರು. ಗ್ರಾಮಸ್ಥರ ಸಕ್ರಿಯ ಪಾಲ್ಗೊಳ್ಳಿಕೆ, ಕ್ರೀಡಾಭಿಮಾನಿಗಳ ಬೆಂಬಲ ಮತ್ತು ಆಯೋಜಕರ ಶ್ರಮದಿಂದ ಕಬಡ್ಡಿ ಬಂದಾವಳಿ ಯಶಸ್ವಿಯಾಗಿ ನೆರವೇರಿದ್ದು, ಗ್ರಾಮೀಣ ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು ಇಂತಹ ಕಾರ್ಯಕ್ರಮಗಳು ಮುಂದುವ-ರಿಯಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

# ಮಸ್ಕಿ ತಾಲೂಕಿನ ಕನ್ನಾಳ ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗಳ ನಡೆ ಗ್ರಾಮ ಪಂಚಾಯತಿ ಕಡೆ ಕಾರ್ಯಕ್ರಮ ಕ್ಕೆ ಶಾಸಕ ಆರ್. ಬಸನಗೌಡ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿಯೋಜನೆಗಳನ್ನು ಜಾ-ರಿಗೆ ತಂದಿದೆ- ಶಾಸಕ ಆರ್. ಬಸನಗೌಡ**

**ಮಸ್ಕಿ : ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡು ಪಂಚ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಗೆ ತಂದಿದೆ ಇದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಿದೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಿದೆ ಎಂದು ಖಾದಿ ಗ್ರಾಮದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್. ಬಸನಗೌಡ ತುರ್ವಿಹಾಳ ಹೇಳಿದರು.**

ಮಸ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕನ್ನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ನಡೆ ಗ್ರಾಮ ಪಂಚಾಯತ್ ಕಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಈ ಹಿಂದೆ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಬಿಜೆಪಿ



ಸರ್ಕಾರ ರಾಜ್ಯವನ್ನು ದಿವಾಳಿ ಹಂತಕ್ಕೆ ತಂದಿತ್ತು. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಶಾಸಕರನ್ನು ಖರೀದಿಸಿ ಅಗತ್ಯ ವಸ್ತುಗಳ ಬೆಲೆ ಏರಿಸಿ ಜನರಿಗೆ ತೊಂದರೆ ನೀಡಿದರು. ಈಗ ಕೆಲವರು ಸುಮ್ನೆ ಮೋದಿ ಮೋದಿ ಅಂತಾರೆ ಮುಂದಿನ ದಿನಗಳಲ್ಲಿ ಬಿಜೆಪಿ ಇರಲ್ಲ ಎಂದರು. ಅದಾನಿ ಅಂಬಾನಿ ಅವರಿಗೆ ಮಾತ್ರ ಮೋದಿ ಅನುಕೂಲ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.ಚುನಾವಣೆ ವೇಳೆ ನೀಡಿದ ಭರವಸೆಯಂತೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಕ್ಷೇತ್ರದಲ್ಲಿ 22 ಕ್ಕೂ ಅಧಿಕ ಕಡೆ ಕೆಎಂಎಫ್ ಆಶ್ರಯದಲ್ಲಿ ಸ್ವ ಸಹಾಯ ಒಕ್ಕೂಟಗಳ ಕ್ಷೀರ ಸಂಜೀವಿನಿ ಆರಂಭಿಸಲಾಗಿದೆ. ರೈತರ ಬೇಡಿಕೆಯಂತೆ ಕನ್ನಾಳದಲ್ಲಿ ಪಶು ಆಸ್ಪತ್ರೆ ಆರಂಭಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಐದು ಸಾವಿರ ಕೋಟಿ ರೂ. ವಿನಿಯೋಗಿಸಲಾಗುತ್ತಿದೆ. ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಗಳು ಶಾಶ್ವತವಾಗಿರಲಿವೆ

ಮಸ್ಕಿ ಕ್ಷೇತ್ರದಲ್ಲಿ ಅರೋಗ್ಯ ಹಾಗೂ ಶಿಕ್ಷಣ ಸೇ-ರಿದಂತೆ ಮೂಲಭೂತ ಸೌಕರ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

ನಂತರ ಗ್ಯಾರಂಟಿ ಯೋಜನೆಗಳ ಸಮಿತಿ ತಾಲೂಕು ಅಧ್ಯಕ್ಷ ಮಹಿಬೂಬಸಾಬ್ ಮುದ್ದಾಪುರು ಮಾತನಾಡಿ ಪಂಚ ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಅಭಿವೃದ್ಧಿಯಾಗಲಿದೆ ಎಂದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಮಹಿಬೂಬ್ ಸಾಬ್ ಮುದ್ದಾಪುರ, ಕನ್ನಾಳ ಗ್ರಾಪಂ ಅಧ್ಯಕ್ಷೆ ಸರಸ್ವತಿ, ಗ್ರಾಪಂ ಉಪಾಧ್ಯಕ್ಷರಾದ ಹನುಮಂತ, ಜೆಸ್ಕಾಂ ಎಇಇ ವೆಂಕಟೇಶ್, ಆಹಾರ ಇಲಾಖೆಯ ರಾಮಕೃಷ್ಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಾದ ರಾಜೇಶ್ವರಿ, ಕೆಡಿಪಿ ಸದಸ್ಯರಾದ ಬಸವಂತಪ್ಪ ಮಟ್ಟೂರು, ಸಮಿತಿಯ ಸದಸ್ಯರಾದ ರವಿ ಪಾಟೀಲ್, ಚೆನ್ನಬಸವ, ಪೌಲ್ ರಾಜ್, ಶಂಕರಗೌಡ, ನಾಗರತ್ನ ಕಟ್ಟಿಮನೆ, ಸುರೇಶ್ ಕಜ್ಜಿ, ಬಾಲರಾಜ್, ಕನ್ನಾಳ ಗ್ರಾಪಂ ಪಿಡಿಒ ಕೃಷ್ಣ ಹುನಗುಂದ, ತಲೇಖಾನ್ ಗ್ರಾಪಂ ಪಿಡಿಒ ಜ್ಯೋತಿಬಾಯಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ ವಲಯ ಮೇಲ್ವಿಚಾರಕರಾದ ಮೌನೇಶ್, ಪ್ರಕಾಶ್, ನರೇಗಾ ಯೋಜನೆಯ ತಾಂತ್ರಿಕ ಸಂಯೋಜಕರಾದ ಅಶೋಕ್, ತಾಂತ್ರಿಕ ಸಹಾಯಕ ಅಭಿಯಂತರರಾದ ಪಂಪಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು, ಗ್ರಾಪಂ ಸಿಬ್ಬಂದಿ ಇದ್ದರು. ಮಸ್ಕಿ ತಾಪಂ ಸಹಾಯಕ ನಿರ್ದೇಶಕರಾದ (ಪಂ. ರಾ) ಸೋಮನಗೌಡ ಪಾಟೀಲ್ ನಿರೂಪಿಸಿದರು. ಆಶಾ ಕಾರ್ಯಕರ್ತೆ ಮರಿಯಮ್ಮ ಪ್ರಾರ್ಥಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# BHMS

ಹೋಮಿಯೋಪಥಿ ವೈದ್ಯಕೀಯ ಪದವಿ ಎಂದರೆ BHMS (ಬ್ಯಾಚುಲರ್ ಆಫ್ ಹೋಮಿಯೋಪಥಿಕ್ ಮೆಡಿಸಿನ್ ಅಂಡ್ ಸರ್ಜರಿ) ಇಂದು ಹೋಮಿಯೋಪತಿಯು ತ್ವರಿತವಾಗಿ ಪ್ರಗತಿಹೊಂದುತ್ತಿರುವ ಒಂದು ವೈದ್ಯಕೀಯ ಪದ್ಧತಿಯಾಗಿದ್ದು, ಸಾಧಾರಣವಾಗಿ ವಿಶ್ವದ ಎಲ್ಲೆಡೆಗಳಲ್ಲೂ ಆಚರಣೆಯಲ್ಲಿದೆ. ಗುಳಿಗೆಗಳ ಸುರಕ್ಷೆ ಮತ್ತು ತನ್ನ ಚಿಕಿತ್ಸೆಯ ಸೌಮ್ಯತೆಯಿಂದಾಗಿ ಭಾರತದಲ್ಲಿ ಈ ಪದ್ಧತಿಯು ಮನೆಮಾತಾಗಿದೆ. ಒಂದು ಅಧ್ಯಯನವು ಹೇಳುವ ಪ್ರಾಕಾರ, ಭಾರತೀಯ ಜನಸಂಖ್ಯೆಯ ಶೇ.10 ಭಾಗ ತನ್ನ ಆರೋಗ್ಯ ಶುಶ್ರೂಶೆಯ ಅಗತ್ಯಗಳಿಗೆ ಕೇವಲ ಹೋಮಿಯೋಪತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಹಾಗೂ ಈ ಪದ್ಧತಿಯು ದೇಶದ ಅತ್ಯಂತ ಜನಜನಿತ ವೈದ್ಯಕೀಯ ಪದ್ಧತಿಗಳಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ ಎಂದು ಪರಿಗಣಿಸಲಾಗಿದೆ. ಹೋಮಿಯೋಪತಿ ಎನ್ನುವ ಪದವು ಗ್ರೀಕ್ ಭಾಷೆಯ ಎರಡು ಪದಗಳಿಂದ ಮಾಡಲ್ಪಟ್ಟಿದೆ. "ಹೊಮೋಯ್ಸ್" ಅಂದರೆ, "ಸಮನಾದ"; "ಪ್ಯಾತೋಸ್" ಅಂದರೆ "ನರಳುವಿಕೆ". ಹೋಮಿಯೋಪತಿ ಎಂದರೆ, ಸರಳವಾಗಿ ಹೇಳುವುದಾದರೆ, ಆರೋಗ್ಯಕರ ವ್ಯಕ್ತಿಗಳು ಸೇವಿಸಿದಲ್ಲಿ ಅವರಲ್ಲಿ ಅದೇ ಖಾಯಿಲೆಯನ್ನು ತರುವ ಸಾಮರ್ಥ್ಯವುಳ್ಳ ಔಷಧಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ನೀಡುವುದರ ಮೂಲಕ ಚಿಕಿತ್ಸೆ ಮಾಡುವುದು ಎಂದು ಅರ್ಥ. ಬ್ಯಾಚುಲರ್ ಆಫ್ ಹೋಮಿಯೋಪಥಿಕ್ ಮೆಡಿಸಿನ್ ಅಂಡ್ ಸರ್ಜರಿ): ಇದು ಪದವಿಪೂರ್ವ ಮಟ್ಟದ 66 ತಿಂಗಳ ಕೋರ್ಸ್ ಆಗಿದೆ, ಪದವಿಗೆ ಪ್ರವೇಶ ಪಡೆಯಲು, ವಿದ್ಯಾರ್ಥಿಗಳು ವಿಜ್ಞಾನ ವಿಷಯಗಳೊಂದಿಗೆ 12 ನೇ ತರಗತಿಯಲ್ಲಿ ಶೇಕಡಾ 50% ಅಂಕ ಗಳಿಸಿರಬೇಕು. ಈ ಪದವಿಯು ಹೋಮಿಯೋಪಥಿ ಚಿಕಿತ್ಸಾ ಪದ್ಧತಿ, ಅದರ ತತ್ವಗಳು ಮತ್ತು ರೋಗ ನಿರ್ವಹಣೆಯನ್ನು ಒಳಗೊಂಡಿದೆ. ಉದ್ಯೋಗಗಳು: ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ವಿಮಾ ಕಂಪನಿಗಳು, ಔಷಧೀಯ ಕಂಪನಿಗಳು, ಮತ್ತು ಸಂಶೋಧನಾ ಪ್ರಯೋಗಾಲಯಗಳಲ್ಲಿ ಉದ್ಯೋಗ ಪಡೆಯಬಹುದು.ಸ್ವ-ಉದ್ಯೋಗ: ತಮ್ಮ ಸ್ವಂತ ಕ್ಲಿನಿಕ್ ಅಥವಾ ಆಸ್ಪತ್ರೆ ತೆರೆಯಬಹುದು., ಹೆಚ್ಚುವರಿ ಅಧ್ಯಯನ: ಸಂಶೋಧನಾ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಕೋರ್ಸ್ಗಳನ್ನು ಮುಂದುವರಿಸಬಹುದು.

## ಶಬರಿಮಲೆ ಯಾತ್ರಿಕರಿಗೆ ಎಚ್ಚರಿಕೆ ಸಂದೇಶ ಮಿದುಳು ತಿನ್ನುವ ಅಮೀಬಾಗೆ ಸುರಕ್ಷತಾ ಸಲಹಾ ಮಾರ್ಗಸೂಚಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 19, (ಕರ್ನಾಟಕ ವಾರ್ತೆ): ಕೇರಳ ರಾಜ್ಯದಲ್ಲಿ ನೇಗ್ಲೇರಿಯಾ ಫೌಲೇರಿ (Naegleria fowleri) ಇಂದ ಉಂಟಾಗುವ ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್ (Amoebic meningoencephalitis) ಪ್ರಕರಣಗಳು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಿಂದ ಶಬರಿಮಲೆ ಹೊರಡುವ ಯಾತ್ರಿಕರು ತಮ್ಮ ಆರೋಗ್ಯದ ಬಗ್ಗೆ, ಜಾಗರೂಕರಾಗಿರಲು ಮತ್ತು ಸೋಂಕು ತಡೆಯಲು ಅಗತ್ಯ ಮುನ್ನೆಚ್ಚರಿಕೆ ಮತ್ತು ಸುರಕ್ಷಿತಾ ಕ್ರಮಗಳನ್ನು ಪಾಲಿಸುವ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯವು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಲು ಸಲಹೆಗಳನ್ನು ನೀಡಿದೆ.**

ನೇಗ್ಲೇರಿಯಾ ಫೌಲೇರಿ (Naegleria fowlen) ಎಂಬುದು ಒಂದು ಸ್ವತಂತ್ರವಾಗಿ ಬದುಕುವ ಅಮೀಬಾ ಆಗಿದ್ದು, ಇದು ಮುಖ್ಯವಾಗಿ ಬೆಚ್ಚಗಿನ ಸಿಹಿನೀರು ಹಾಗೂ ಮಣ್ಣಿನಲ್ಲಿ ಕಂಡುಬರುತ್ತದೆ. ಉದಾಹರಣೆಗೆ ನಿಂತ ನೀರು, ಕೊಳ, ಈಜು ಕೊಳಗಳು ಹಾಗೂ ಕೆರೆಗಳು. ಈ ಸೋಂಕು ವ್ಯಕ್ತಿಯಿಂದ ವ್ಯಕ್ತಿಗೆ ಅಥವಾ ಕಲುಷಿತಗೊಂಡ ನೀರನ್ನು ಕುಡಿಯುವುದರಿಂದ ಹರಡುವುದಿಲ್ಲ. ನೇಗ್ಲೇರಿಯಾ ಫೌಲರಿ (Naegleria fowleri) ಅತ್ಯಂತ ವಿಷಕಾರಿ (virulent) ಸೂಕ್ಷ್ಮಜೀವಿಯಾಗಿದ್ದು, ನೀರಿನಿಂದ ಮೂಗಿಗೆ ಪ್ರವೇಶಿಸಿದಾಗ ಅದು ಮೆದುಳನ್ನು ತಲುಪಿ, ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್ (Amoebic meningoencephalitis) ಎನ್ನುವ ಅಪರೂಪದ ಗಂಭೀರ ಮತ್ತು ಮಾರಣಾಂತಿಕ ಖಾಯಿಲೆಯನ್ನು ಉಂಟುಮಾಡುತ್ತದೆ. ಆದ್ದರಿಂದ ಯಾತ್ರೆಯ ಸಂದರ್ಭದಲ್ಲಿ ನಿಂತ ನೀರಿನಲ್ಲಿ ಸ್ನಾನ ಮಾಡುವಾಗ ನೀರು ಪ್ರವೇಶಿಸದಂತೆ ಮೂಗಿನ ಕ್ಲಿಪ್ ಗಳನ್ನು ಬಳಸಿ ಅಥವಾ ನಿಮ್ಮ ಮೂಗನ್ನು ಬಿಗಿಯಾಗಿ ಮುಚ್ಚಿ ಹಿಡಿದು ಮುನ್ನೆಚ್ಚರಿಕೆ ವಹಿಸುವುದು ಸೂಕ್ತ. ನೀರಿನ ಸಂಪರ್ಕದ ಏಳು ದಿನಗಳ ಒಳಗೆ ಜ್ವರ ತೀವ್ರ ತಲೆನೋವು. ವಾಕರಿಕೆ, ವಾಂತಿ, ಕುತ್ತಿಗೆ ಬಿಗಿತ, ಗೊಂದಲ, ಮಾನಸಿಕ ಸ್ಥಿತಿಗಳಲ್ಲಿ ಬದಲಾವಣೆಗಳು ಹಾಗೂ ವ್ಯಕ್ತಿಯ ವರ್ತನೆಯಲ್ಲಿ ಅಸ್ವಸ್ಥತೆ (behavioural disorders) ಲಕ್ಷಣಗಳು ಕಾಣಿಸಿಕೊಂಡರೆ ನಿರ್ಲಕ್ಷಿಸದೆ ತುರ್ತು ಆರೈಕೆಯನ್ನು ಪಡೆಯಲು ಹತ್ತಿರದ ಸರ್ಕಾರಿ ಆಸ್ಪತ್ರೆ ಅಥವಾ ವೈದ್ಯರನ್ನು ಸಂಪರ್ಕಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೇವದುರ್ಗ ತಾಲೂಕಿನ ಕೋತ್ತದೊಡ್ಡಿ ಗ್ರಾಮದಲ್ಲಿ ಚಿರತೆ ಕಾಣಿಸಿದೆ ಎಂದು ಸುಳ್ಳು ಸುದ್ದಿ ಮೊಹಮ್ಮದ್ ಅಲಿಯುದ್ದೀನ್ ವಲಯ ಅರಣ್ಯ ಅಧಿಕಾರಿ ಸ್ಪಷ್ಟನೆ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ ತಾಲೂಕಿನ ಕೋತ್ತದೊಡ್ಡಿ ಗ್ರಾಮದಲ್ಲಿ ಚಿರತೆ ಕಾಣಿಸಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದು ...ಬೇರೆ ಕಡೆಯ ವಿಡಿಯೋದಲ್ಲಿನ ದೃಶ್ಯವಳಿ ದೇವದುರ್ಗ ತಾಲ್ಲೂಕಿಗೆ ಸಂಬಂಧಿಸಿದಲ್ಲ. ಬೇರೆ ಕಡೆಗಿನ ವಿಡಿಯೋ ತುಣುಕನ್ನು ಬಳಸಿಕೊಂಡು ದೇವದುರ್ಗ ತಾಲೂಕಿನ ಕೊತ್ತೊಡ್ಡಿ ಗ್ರಾಮದಲ್ಲಿ ಕಾಣಿಸಿಕೊಂಡಿದ್ದಾಗಿ ಸುಳ್ಳು ಪ್ರಚಾರ ಮಾಡಲಾಗಿರುತ್ತದೆ.**




ದಿನಾಂಕ 16-11-2025 ರಂದು ಕಾಚಾಪುರ ಗ್ರಾಮದಲ್ಲಿ ಹಸುವಿನ ಮೇಲೆ ದಾಳಿ ಮಾಡಿ ತಿಂದಿದ್ದು ಸದರಿ ಸ್ಥಳದಲ್ಲಿ ಬೋನ್ ಮತ್ತು ಕ್ಯಾಮರಾ ಅಳವಡಿಸಲಾಗಿರುತ್ತದೆ. ಮೂರು ದಿನಗಳಿಂದ ಚಿರತೆಯ ಚಲನ ವಲನದ ಬಗ್ಗೆ ಯಾವುದೇ ಮಾಹಿತಿ ದೊರೆತಿರುವದಿಲ್ಲ. ಸದರಿ ಸ್ಥಳದಿಂದ ಚಿರತೆ ಬೇರೆ ಸ್ಥಳಕ್ಕೆ ವಲಸೆ ಹೋಗಿರುವ ಸಾಧ್ಯತೆ ಇರುತ್ತದೆ ಎಂದು ಮೊಹಮ್ಮದ್ ಅಲಿಯುದ್ದೀನ್ ವಲಯ ಅರಣ್ಯ ಅಧಿಕಾರಿ ದೇವದುರ್ಗ ತಿಳಿಸಿದರು.

# ಮಾನವ ಸಂಬಂಧಗಳ ಮಧ್ಯೆ ಗೋಡೆಗಳು ಏಳುತ್ತಿವೆ..

## ಜಮಾಅತೆ ಇಸ್ಲಾಮಿ ಹಿಂದ್ ನಿಂದ ಮಾದರಿ ನೆರೆಹೊರೆ ಮಾದರಿ ಸಮಾಜ ಅಭಿಯಾನ




**ಉತ್ತಮ ನೆರೆಹೊರೆಯವರು ತಮ್ಮ ಸುತ್ತಮುತ್ತಲಿನ ನೆರೆಹೊರೆಯವರನ್ನು ಗೌರವಿಸುತ್ತಾರೆ. ಪರಸ್ಪರವಾಗಿ ಸಹಕರಿಸುತ್ತಾರೆ. ಸು:ಖದು:ಖಗಳನ್ನು ಕೂಡ ಹಂಚಿಕೊಳ್ಳುತ್ತಾರೆ. ಸಕಲ ಮಾನವರು ಪರಸ್ಪರ ಸಹೋದರರು. ನಾವು ಒಳ್ಳೆಯವರಾದರೆ ನೆರೆಹೊರೆ ಒಳ್ಳೆಯದು, ನೆರೆಹೊರೆ ಒಳ್ಳೆಯದಾದರೆ ಸಮಾಜವು ಒಳ್ಳೆಯದು, ಸಮಾಜ ಒಳ್ಳೆಯದಾದರೆ ದೇಶ ಒಳ್ಳೆಯದು, ಹೀಗೆ ಮಾದರಿ ನೆರೆಹೊರೆ ಮಾದರಿ ಸಮಾಜದ ನಿರ್ಮಾಣಕ್ಕಾಗಿ ಜಮಾಅತೆ ಇಸ್ಲಾಮಿ ಹಿಂದ್ ರಾಷ್ಟ್ರವ್ಯಾಪಿ ಅಭಿಯಾನ ಆರಂಭಸಿದೆ ಎಂದು ಅದ್ಯಕ್ಷರಾದ ಹುಸೇನಸಾಬ್ ಹೇಳಿದರು.**

ಬುಧವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ಜಮಾಅತೆ ಇಸ್ಲಾಮಿ ಹಿಂದ್ ಸಂಘಟನೆ ನವೆಂಬರ್ 21 ರಿಂದ 30 ರವರೆಗೆ ನೆರೆಹೊರೆಯವರ ಹಕ್ಕುಗಳು ಹಾಗೂ ಮಾದರಿ ಸಮಾಜದ ನಿರ್ಮಾಣಕ್ಕಾಗಿ ಅಭಿಯಾನ ಆರಂಭಿಸಿದೆ. ಆಧುನಿಕ ಜಗತ್ತಿನಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ನಮ್ಮ ಮನೆಯ ಅಂಗಳದಲ್ಲಿ ನೆರೆಹೊರೆಯಲ್ಲಿ ಏನು ನಡೆದಿದೆ ಎನ್ನುವುದು ನಮಗೆ ಗೊತ್ತಿಲ್ಲ. ಗೋಡೆಯಲ್ಲಿ ಬಿರುಕು ಬಿದ್ದರೆ ಗೋಡೆ ಬಿದ್ದು ಹೊಗುತ್ತದೆ. ಮಾನವನ ಸಂಬಂಧಗಳಲ್ಲಿ ಬಿರುಕು ಬಿದ್ದರೆ ಗೋಡೆ ಎದ್ದು ನಿಲ್ಲುತ್ತದೆ. ಈ ಗೋಡೆಗಳ ಸಂಬಂಧಗಳ ದುರಸ್ತಿ ಆಗಬೇಕಾಗಿದೆ. ಆ ಕಾರಣದಿಂದ ಒಳ್ಳೆಯ ಸಮಾಜ, ಒಳ್ಳೆಯ ದೇಶ ಕಟ್ಟುವ ಕಡೆ ಸಂಘಟನೆ ವತಿಯಿಂದ ಅಭಿಯಾನ ಪ್ರಾರಂಭಿಸಿದೆ. ನಮ್ಮೆಲ್ಲರಿಗೂ ಒಬ್ಬನೇ ಸೃಷ್ಟಿಕರ್ತನು ನಾವು ಆತನ ದಾಸರು, ಸಕಲ ಮಾನವರು ಒಂದೇ ತಂದೆ ತಾಯಿ ಮಕ್ಕಳು, ಆದರೂ ನಮ್ಮ ಸ್ವಾರ್ಥದಿಂದ ಸಣ್ಣಪುಟ್ಟ ವಿಷಯಗಳಿಗೆ ಜಗಳವಾಡುವುದು ಸರಿಯಲ್ಲ. ಈ ಕಾರಣದಿಂದಾಗಿ ಜಾಗೃತಿ ಮೂಡಿಸುವ ಜನರಿಗೆ ಅರಿವು ಮೂಡಿಸುವ ಕಾರ್ಯ ಮಾಡುತ್ತಿದ್ದೇವೆ ಎಂದರು. ಈ ವೇಳೆ: ಪತ್ರಿಕಾಗೋಷ್ಠಿಯಲ್ಲಿ ಬಾಬರ್ ಬೇಗ್, ಸ್ವಾಲಿಡಾರಿಟಿ ಯೂಥ್ ಮೊಮೆಂಟ್ ಅಧ್ಯಕ್ಷ ಅಬುಲೈಸ್ ನಾಯಕ್, ಉಪಾಧ್ಯಕ್ಷ ಇಸ್ಮಾಯಿಲ್, ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗದ ಅಧ್ಯಕ್ಷೆ ಅತಿಯಾ ಫೌಝಿಯಾ, ಲುಬ್ನಾ ಬೆಳಗಾಮಿ ಕಾರ್ಯದರ್ಶಿ, ಗರ್ಲ್ಸ್ ಇಸ್ಲಾಮಿಕ್ ಅಧ್ಯಕ್ಷೆ ನೇಹಾ ಸಮ್ರೀನ್, ಆರ್ಗನೈಜೇಷನ್ ಸಿಂಧನೂರು. ಹಾಗೂ ಸೈದಾ ಬೇಗಂ ಉಪಸ್ಥಿತರಿದ್ದರು.

# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆರ್.ಎಚ್. ನಂ: 1 ರಲ್ಲಿ ಮಕ್ಕಳ ದಿನಾಚರಣೆ ಹಾಗೂ ಪೋಷಕ ಶಿಕ್ಷಕರ ಮಹಾಸಭೆ ಯಶಸ್ವಿ




❑ ನೈಜ್ಯ ದೆಸೆ ನ್ಯೂಸ್

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆರ್. ಎಚ್. ನಂ: 1 ರಲ್ಲಿ ಮಕ್ಕಳ ದಿನಾಚರಣೆ ಹಾಗೂ ಪೋಷಕ?ಶಿಕ್ಷಕರ ಮಹಾಸಭೆಯನ್ನು ಅತ್ಯಂತ ವಿನೂತನವಾಗಿ, ಸಂಭ್ರಮ ಸಡಗರಗಳಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಸೆಳೆಯುವಂತಿದ್ದವು. ಮಕ್ಕಳಿಗೆ ಹರ್ಷ?ಉತ್ಸಾಹ ತುಂಬುವ ಚಟುವಟಿಕೆಗಳು ಮತ್ತು ಸ್ಪರ್ಧೆಗಳು ದಿನವನ್ನು ಇನ್ನಷ್ಟು ವಿಶೇಷವಾಗಿಸಿತು.**

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ಉಮೇದ್ ಸಾಹೇಬ್ ಪಿ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರೆಹಮತ್ ಪಾಷಾ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರುಗಳಾದ ಕರ್ಣನ್ ಹಾಗೂ ಪರಸಪ್ಪ ಗೋಡಿಹಾಳ, ಜೊತೆಗೆ ಎಸ್‌ಡಿಎಂಸಿ ಸದಸ್ಯರಾದ ಬಸವರಾಜ್ ಹಂಚಿನಾಳ ಮತ್ತು ಪೋಷಕರ ಪ್ರತಿನಿಧಿ ಮಂಜುನಾಥ್ ಭಜಂತ್ರಿ ಅವರು ಭಾಗವಹಿಸಿ ಕಾರ್ಯಕ್ರಮಕ್ಕೆ ಗೌರವದ ಬೆಳಕು ತುಂಬಿದರು.

ವೇದಿಕೆಯ ಮೇಲೆ ಮಕ್ಕಳ ದಿನಾಚರಣೆಯ ವಿಶೇಷವಾಗಿ ಶಾಲಾ ಸಂಸತ್ತಿನ ಮಂತ್ರಿ ಮಂಡಳಿಯ ಪ್ರತಿನಿಧಿಗಳು ಕೂಡ ಉಪಸ್ಥಿತರಿದ್ದು, ಮಕ್ಕಳ ನಾಯಕತ್ವ ಮತ್ತು ಹೊಣೆಗಾರಿಕೆಯನ್ನು ಉತ್ತೇಜಿಸುವ ಕೆಲಸ ಮಾಡಿದರು. ಮಕ್ಕಳ ದಿನಾಚರಣೆಯು ಮಕ್ಕಳ ಪ್ರತಿಭೆ ಅನಾವರಣಗೊಳ್ಳುವ ವೇದಿಕೆಯಾಗಿದ್ದು, ಪೋಷಕರ?ಶಿಕ್ಷಕರ ಮಹಾಸಭೆಯ ಮೂಲಕ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಮತ್ತು ಶಾಲೆಯ ಮುಂದಿನ ಯೋಜನೆಗಳ ಬಗ್ಗೆ ಚರ್ಚೆ ನಡೆಯಿತು. ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲು ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ನೀಡಿದ ಸಹಕಾರ ಪ್ರಶಂಸನೀಯವಾಗಿದೆ.

# ಹೊಲಿಗೆಯಂತ್ರ ವಿತರಣಾ ಯೋಜನೆಗೆ ಅರ್ಜಿ ಸಲ್ಲಿಸಲು ಡಿಸೆಂಬರ್ 06 ಕೊನೆಯ ದಿನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 19 (ಕರ್ನಾಟಕ ವಾರ್ತೆ): ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿನ ಹೊಲಿಗೆ ಯಂತ್ರ ವಿತರಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಹಾಗೂ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.**

ದಾಖಲಾತಿಗಳು: ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಈ ಯೋಜನೆಗೆ ಅರ್ಜಿ ಸಲ್ಲಿಸಲು ಪ್ರವರ್ಗ-3-ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ ಬರುವ ಸಮುದಾಯಕ್ಕೆ ಸೇರಿರಬೇಕು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ-3ಬಿ ಯಲ್ಲಿ ಪಡೆದಿರುವ ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು. ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು ಹಾಗೂ ಆಧಾರ್ ಕಾರ್ಡ್ ಹೊಂದಿರಬೇಕು. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳನ್ನು ಮೀರಿರತಕ್ಕದ್ದಲ್ಲ. ಒಂದು ಕುಟುಂಬದಲ್ಲಿ ಓರ್ವ ಸದಸ್ಯರನ್ನು ಮಾತ್ರ ಈ ಸೌಲಭ್ಯಕ್ಕೆ ಪರಿಗಣಿಸಲಾಗುವುದು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ.98.000 ಗಳು ಹಾಗೂ ನಗರ ಪ್ರದೇಶದಲ್ಲಿ ರೂ. 1,20.000 ಗಳನ್ನು ಮೀರತಕ್ಕದ್ದಲ್ಲ. ಅಂಗವಿಕಲ ಮಹಿಳೆಯರಿಗೆ ಶೇ.5 ರಷ್ಟು ಮೀಸಲಿರಿಸಲಾಗಿದೆ.

ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33ರಷ್ಟು, ವಿಕಲಚೇತನರಿಗೆ ಶೇ.5ರಷ್ಟು ಹಾಗೂ ತೃತೀಯ ಲಿಂಗಳಿಗೆ ಶೇ.1ರಷ್ಟು ಅಂಗವಿಕಲ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸಲಾಗುವುದು. ವಿಧವೆಯರಿಗೆ, ಪರಿತ್ಯಕ್ತ ಮಹಿಳೆಯರಿಗೆ ಹೆಚ್.ಐ.ವಿ ಪೀಡಿತರಿಗೆ 35 ವರ್ಷವಯೋಮಿತಿ ಮೀರಿರತಕ್ಕ ಅವಿವಾಹಿತ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸಲಾಗಿದೆ.

ಈ ಯೋಜನೆಗೆ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಡಿಸೆಂಬರ್ 06ರರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ವಿಶೇಷ ಸೂಚನೆ: ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರು ಸಹ ಆನ್ ಲೈನ್ ನಲ್ಲಿ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು ಹಾಗೂ ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಈ ಯೋಜನೆಯಲ್ಲಿ ಒಂದು ಸಲ ಸೌಲಭ್ಯ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ಸಹಾಯವಾಣಿ: 8867537799 ಮತ್ತು ದೂರವಾಣಿ ಸಂಖ್ಯೆ; 080-29903994, ಹಾಗೂ ಕಚೇರಿಯ ವಿಳಾಸ https://kmcdc.karnataka.gov.in ಗೆ, ಬೆಳಗ್ಗೆ 10 ರಿಂದ ಸಂಜೆ 5.30ರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆತ್ತವರ ಋಣ ಯಾರಿಂದಲೂ ತೀರಿಸಲಾಗದು ಹಡೆದವರ ಒಡಲು ನೋಯಿಸದಿರಿ ರಹೆಮಾನಸಾಬ್ ನದಾಫ್

❑ ನೈಜ್ಯ ದೆಸೆ ನ್ಯೂಸ್





**ಮಸ್ಕಿ: ಬುದುವಾರ ಬೆಳಿಗ್ಗೆ ಮಸ್ಕಿಯ ದೇವನಾಂಪ್ರಿಯ ಅಶೋಕ ಸರಕಾರಿ ಪ್ರಥ-'ಮ ದರ್ಜೆ ಕಾಲೇಜಿನ ಫಂಕ್ಷನ್ ಹಾಲ್ ನಲ್ಲಿ ಆಯೋಜಿಸಲಾಗಿದ್ದ 2025-26 ನೇ ಸಾಲಿನ ಬಿ,ಎ,ಬಿ,ಕಾಮ್,ಬಿ,ಎಸ್,ಸಿ, ಮತ್ತು ಎಮ್,ಎ,ಎಮ್,ಕಾಮ್,ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆ,ಮರಿಯಮ್ಮನ ಹಳ್ಳಿಯ ರಿ,ಟ,ರಿ,ಪ್ರೌಢಶಾಲೆಯ ಶಿಕ್ಷಕ ರಹೆಮಾನಸಾಬ್ ನದಾಫ್ ಹೆತ್ತವರ ಋಣ ಯಾರಿಂದಲೂ ತೀರಿಸಲಾಗದು ಅವರ ಒಡಲನ್ನು ನೋಯಿಸದಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳಿದರು.**

ಉದ್ಘಾಟಕರಾಗಿ ಆಗಮಿಸಿದ್ದ ಶಾಸಕ ಆರ್,ಬಸನಗೌಡ ತುರುವಿಹಾಳ್ ಮಾತನಾಡಿ ನೀವು ವಿದ್ಯಾರ್ಜನೆ ಮಾಡಿ ಹೆತ್ತವರಿಗೆ ಉಪನ್ಯಾಸಕರಿಗೆ ಕೀರ್ತಿ ತಂದು ಉತ್ತಮ ಪ್ರಜೆಗಳಾಗಿ ಬದುಕಬೇಕು ಅಂದಾಗ ಮಾತ್ರ ನಿಮ್ಮ ಜೀವನ ಸಾರ್ಥಕವಾಗುತ್ತದೆಂದರು. ಅಧ್ಯಕ್ಷೀಯ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲ ಡಾ,ಮಹಾಂತಗೌಡ ಪಾಟೀಲ್ ಇದು ನಿಮ್ಮ ಬದುಕಿನ ಪರಿವರ್ತನಾ ಕೇಂದ್ರ ಇಲ್ಲಿ ಕಲಿತ ಜ್ಞಾನ ನಿಮ್ಮ ಜೀವನ ಮತ್ತು ಸಮಾಜದ ಪರಿವರ್ತನೆಗೆ ಸಾಧನವಾಗುತ್ತದೆ, ಜವಬ್ದಾರಿಯನ್ನರಿತು ವಿದ್ಯಾಭ್ಯಾಸ ಮಾಡಿ ಉತ್ತಮ ಪ್ರಜೆಗಳಾಗಿ ಎಂದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ನಂತರ ಶಾಸಕರಿಗೆ ಅತಿಥಿ ಉಪನ್ಯಾಸಕರ ಸಂಘದಿಂದ ಉದ್ಯೋಗ ಭದ್ರತೆ ನೀಡುವಂತೆ ಒತ್ತಾಯಿಸಿ ಚಳಿಗಾಲದ ಅಧಿವೇಷನದಲ್ಲಿ ಧ್ವನಿ ಎತ್ತುವಂತೆ ಒತ್ತಾಯಿಸಿ ಮನವಿಪತ್ರವನ್ನು ನೀಡಲಾಯಿತು. ನಂತರ ಸ್ನಾತಕೋತ್ತರ ಪದವಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿನಿಯರಿಗೆ ಗೌರವ ಸನ್ಮಾನ ಮಾಡಲಾಯಿತು. ಅದೇ ವೇದಿಕೆಯಲ್ಲಿ ಶಾಸಕರಿಗೆ ಮುಖ್ಯ ಅತಿಥಿಗಳಿಗೆ ಮತ್ತು ವರ್ಗಾವಣೆಗೊಂಡ ಮತ್ತು ಹೊಸದಾಗಿ ಕಾಲೇಜಿಗೆ ಆಗಮಿಸಿದ ಸಹಾಯಕ ಮತ್ತು ಸಹಪ್ರಾಧ್ಯಾಪಕರಿಗೆ,ಅಧೀಕ್ಷಕರಿಗೆ, ಸನ್ಮಾನಿಸಲಾಯಿತು. ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ವೇದಿಕೆಯ ಮೇಲೆ ಶಾಸಕ ಆರ್,ಬಸನಗೌಡ ತುರುವಿಹಾಳ್,ಪ್ರಾಂಶುಪಾಲ ಡಾ,ಮಹಾಂತಗೌಡ ಪಾಟಿಲ್,ಮುಖ್ಯ ಅತಿಥಿ ರಹೆಮಾನಸಾಬ್ ನದಾಫ್,ಸಹ ಪ್ರಾಧ್ಯಾಪಕ ರಾಮಣ್ಣ ಜುಮ್ಮಾ,ಬಸವರಾಜ ತಡಕಲ್,ಸಹಾಯಕ ಪ್ರಾಧ್ಯಾಪಕ ಇಮಾಮ್ ಸಾಬ್,ಯಾಳಗಿ ಶ್ರೀನಿವಾಸ,ಸುರೇಶ ಬಳಗಾನೂರು ಇದ್ದರು. ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕ, ಪ್ರಾಧ್ಯಾಪಕಿಂ-ಯರು,ಅತಿಥಿ ಉಪನ್ಯಾಸಕ,ಉಪನ್ಯಾಸಕಿಂ-ಯರು, ವಿದ್ಯಾರ್ಥಿಗಳು,ಬೋಧಕೇತರ ಸಿಬ್ಬಂಧಿ ವರ್ಗದವರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101